Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 21
Issue - 03
March- 2024



ಮಾರ್ಚ್ ೦೮
**ಅಂತರರಾಷ್ಟ್ರೀಯ ಮಹಿಳಾ ದಿನ**

ಮಾರ್ಚ್ 15
**ವಿಶ್ವ ಗ್ರಾಹಕ ಹಕ್ಕುಗಳ ದಿನ**

ಮಾರ್ಚ್ ೦೮
**ಮಹಾ ಶಿವರಾತ್ರಿ**

ಬ್ರಹ್ಮ ಮುರಾರಿ ಸುರಾರ್ಚಿತ ಲಿಂಗಂ,
ನಿರ್ಮಲ ಭಾಸಿತ ಶೋಭಿತ ಲಿಂಗಂ ।
ಜನ್ಮಜ ದುಃಖ ವಿನಾಶಕ ಲಿಂಗಂ,
ತತ್ಪ್ರಣಮಾಮಿ ಸದಾ ಶಿವಲಿಂಗಂ



ಮಾರ್ಚ್ 29
**ಗುಡ್ ಫ್ರೈಡೆ**





ಮಾರ್ಚ್ 25
**ಹೋಳಿ**

ಸೌಹಾರ್ದ ಸಹಕಾರಿಗಳ
ಸಂಖ್ಯೆ : 6158

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1622



ಜಿ. ನಂಜನಗೌಡ

ಎಲ್ಲಾ ಸಹಕಾರಿ ಬಂಧುಗಳಿಗೂ ಮಹಾಶಿವರಾತ್ರಿ ಹಾಗೂ ವಿಶೇಷವಾಗಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಗುಡ್ ಫ್ರೈಡೆ ದಿನದ ಹಾರ್ದಿಕ ಶುಭಾಶಯಗಳು.

ಸೌಹಾರ್ದ ಸಹಕಾರಿ ಚಳುವಳಿಗೆ ಈಗ 24 ವರ್ಷಗಳ ಸಂಭ್ರಮ. ಈ ಅವಧಿಯಲ್ಲಿ ಸೌಹಾರ್ದ ಸಹಕಾರಿ ಚಳುವಳಿಯು ರಾಜ್ಯದ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಹಕಾರಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

# ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಆರ್ಥಿಕ ಶಿಸ್ತು ನಿರ್ವಹಣೆ ಅತ್ಯಗತ್ಯ.

**ಆತ್ಮೀಯರೇ**

ಎಲ್ಲಾ ಸಹಕಾರಿ ಬಂಧುಗಳಿಗೂ ಮಹಾಶಿವರಾತ್ರಿ ಹಾಗೂ ವಿಶೇಷವಾಗಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಗುಡ್ ಫ್ರೈಡೆ ದಿನದ ಹಾರ್ದಿಕ ಶುಭಾಶಯಗಳು.

ಸೌಹಾರ್ದ ಸಹಕಾರಿ ಚಳುವಳಿಗೆ ಈಗ 24 ವರ್ಷಗಳ ಸಂಭ್ರಮ. ಈ ಅವಧಿಯಲ್ಲಿ ಸೌಹಾರ್ದ ಸಹಕಾರಿ ಚಳುವಳಿಯು ರಾಜ್ಯದ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಹಕಾರಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಎಲ್ಲಾ ಸಹಕಾರಿಗಳು ಸಂಯುಕ್ತ ಸಹಕಾರಿಯ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವ ಮೂಲಕ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣಗಳನ್ನು ಅಳವಡಿಸಿಕೊಂಡು ಹಲವಾರು ಏಳು–ಬೀಳುಗಳ ನಡುವೆ ಹೊಸದನ್ನು ಸ್ವಾಗತಿಸಿ ಕಲಿಯುವುದರ ಜೊತೆಗೆ ಅಳವಡಿಸಿಕೊಳ್ಳುತ್ತಾ ನವ ಯುಗದ ಯುವ ಸಹಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಸ್ವಾಗತಾರ್ಹ.

ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳು ಕಳೆದ ಒಂದು ನೂರು ವರ್ಷಗಳ ಇತಿಹಾಸದಲ್ಲಿ ಸಾಧಿಸಲು ಕಷ್ಟಸಾಧ್ಯವಾಗಿರುವುದನ್ನು ಸೌಹಾರ್ದ ಸಹಕಾರಿಗಳು 24 ವರುಷಗಳ ಅವಧಿಯಲ್ಲಿ ಸಾಧಿಸಿ ತೋರಿಸಿರುವುದು ಗಮನಾರ್ಹ ಸಂಗತಿ. ಈ ಸಾಧನೆಗೆ ಕಾರಣ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇರುವ ವ್ಯವಹಾರಿಕ ಸ್ವಾತಂತ್ರ್ಯ ಆದಾಗ್ಯೂ ಸಹ ಕೆಲವೇ ಕೆಲವು ಬೆರಳೆಣಿಕೆಯಷ್ಟು ಸಹಕಾರಿಗಳು ಸ್ವಾತಂತ್ರ್ಯವನ್ನು ಸ್ವೇಚ್ಛೆಯಾಗಿಸಿಕೊಂಡು ಆರ್ಥಿಕ ಶಿಸ್ತನ್ನು ಅಳವಡಿಸಿಕೊಳ್ಳದೆ ದಾರಿ ತಪ್ಪಿವೆಯಾದರೂ ಸಂಯುಕ್ತ ಸಹಕಾರಿಯು ಈ ನಿಟ್ಟಿನಲ್ಲಿ ಕಾನೂನು ಕ್ರಮ ತೆಗೆದುಕೊಳ್ಳುವಲ್ಲಿ ನಿರತವಾಗಿದೆ.

ಆರ್ಥಿಕ ಶಿಸ್ತು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಅತ್ಯಂತ ಅವಶ್ಯಕ. ಸಹಕಾರಿಗಳ ಆರ್ಥಿಕ ಶಿಸ್ತಿನಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ, ನಿಯಮಗಳು, ಸಹಕಾರಿಯ ಉಪವಿಧಿಗಳು, ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪಾಲನೆ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಸದಸ್ಯರ ಠೇವಣಿಗಳ ಹಿತ ರಕ್ಷಣೆ, ಸುರಕ್ಷಾ ಮತ್ತು ಲಾಭದಾಯಕ ಹೂಡಿಕೆಗೆ ಕ್ರಮ, ಸಹಕಾರಿ ಸಂಸ್ಥೆಗಳಲ್ಲಿ ದ್ರವ್ಯಾಸ್ತಿಗಳ ನಿರ್ವಹಣೆ, ಸದಸ್ಯರಿಗೆ ಸಾಲ ನೀಡುವಾಗ ಅನುಸರಿಸಬಹುದಾದ ಆರ್ಥಿಕ ಸಬಲತೆಯ ಮಾನದಂಡಗಳು, ಸಾಲ ವಸೂಲಾತಿಯಲ್ಲಿ ಕಟ್ಟು ನಿಟ್ಟಾದ ಕ್ರಮ, ಕಾಲ ಕಾಲಕ್ಕೆ ಹಣಕಾಸಿನ ಸ್ಥಿತಿಗತಿಗಳ ಅಧ್ಯಯನ ಹಾಗೂ ಕಾರ್ಯಯೋಜನೆಗಳ ಅನುಷ್ಠಾನ, ಆಂತರಿಕ ಲೆಕ್ಕ ಪರಿಶೋಧನೆಯ ವ್ಯವಸ್ಥೆ, ಸಕಾಲದಲ್ಲಿ ಲೆಕ್ಕ ಪರಿಶೋಧನೆ, ಹಣಕಾಸು ನಿರ್ವಹಣಾ ಸಿಬ್ಬಂದಿಗಳಿಗೆ ಜವಾಬ್ದಾರಿ, ಕಾರ್ಯನಿರ್ವಹಣೆಯ ಮೇಲೆ ನಿಗಾವಹಿಸುವುದು, ಹಣಕಾಸಿನ ನಿರ್ವಹಣೆಯ ಬಗ್ಗೆ ತರಬೇತಿ ಆಯೋಜನೆ, ಹೀಗೆ ಸಹಕಾರಿಯ ಪ್ರತಿ ಹಂತದಲ್ಲಿಯೂ ಶಿಸ್ತುಬದ್ದ ಹಣಕಾಸಿನ ನಿರ್ವಹಣೆಯಿಂದ ಸಹಕಾರಿ ಸಂಸ್ಥೆಗಳು ಸಧೃಡವಾಗಿ ಕಾರ್ಯನಿರ್ವಹಿಸುವ ಜೊತೆಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸದಸ್ಯರ, ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 20
**ಲೇಖನಗಳು :**
ದಿನಾಂಕ 16 ಫೆಬ್ರವರಿ 2024ರಂದು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ವಿಧಾನ ಸಭೆಯಲ್ಲಿ ಮಂಡಿಸಿದ 2024–25ನೇ ಸಾಲಿನ ಆಯವ್ಯಯದ ಪ್ರಮುಖ ಅಂಶಗಳು .......... 21–24
ಪ್ರಪಂಚದ ಸಹಕಾರಿ ಪತ್ರಿಕೋದ್ಯಮದ ಪಿತಾಮಹ ಇಂಗ್ಲೆಂಡ್‌ನ ಡಾ. ವಿಲಿಯಂ ಕಿಂಗ್....... 30–31
ರಾಷ್ಟ್ರೀಯ ಮಹಿಳಾ ದಿನ .......... 32

# ಸಂಪಾದಕೀಯ

## ಮಾರ್ಚ್ ಹಣಕಾಸಿನ ವ್ಯವಹಾರಗಳ ವರ್ಷಾಂತ್ಯ : ಲಾಭ ಹಾನಿಗಳತ್ತ ಸಹಕಾರಿ ಸಂಸ್ಥೆಗಳ ಗಮನ. ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ಅಗತ್ಯ.

ಪ್ರತಿ ವರ್ಷ ಮಾರ್ಚ್ ಮಾಹೆಯ ಅಂತ್ಯದಲ್ಲಿ ಪ್ರತಿಯೊಂದು ಸಹಕಾರ ಸಂಘದ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವುದು ಅಗತ್ಯ ಹಾಗೂ ಕಡ್ಡಾಯ. ಲೆಕ್ಕ ಪತ್ರಗಳನ್ನು ಅಂತಿಮಗೊಳಿಸಿದ ನಂತರವೇ ಸಹಕಾರಿ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳ ಸಿದ್ಧತೆ ನಡೆದು ವ್ಯಾಪಾರಿ ತಃಖ್ತೆ ಲಾಭ ನಷ್ಟಗಳ ತಃಖ್ತೆ (Trading account) ಹಾಗೂ ಆಸ್ತಿ ಜವಾಬ್ದಾರಿಗಳ ತಃಖ್ತೆ ಬ್ಯಾಂಕ ರಿಕನ್ಸಿಲಿಯೇಷನ್ ಮಾಡಿ ಸಹಕಾರಿ ಸಂಸ್ಥೆಯ ಲಾಭ ಅಥವಾ ನಷ್ಟ ನಿರ್ಣಯಕ್ಕೆ ಬರುತ್ತದೆ.

ಸಹಕಾರಿ ಸಂಸ್ಥೆಗಳಲ್ಲಿ ಹಲವು ವಿಧವಾದ ವ್ಯಾಪಾರ ವ್ಯವಹಾರಗಳು ನಡೆದಿರುತ್ತವೆ. ಸಹಕಾರಿ ಸಂಸ್ಥೆಗಳ ಮಾಲೀಕರು ಸದಸ್ಯರೇ ಆಗಿರುವುದರಿಂದ ಸಂಸ್ಥೆಯ ಎಲ್ಲ ವ್ಯವಹಾರಗಳು ಸದಸ್ಯರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಅತ್ಯಂತ ಪಾರದರ್ಶಕವಾಗಿ ಸಂಸ್ಥೆಯ ನೈಜ ಆರ್ಥಿಕ ಸ್ಥಿತಿಗತಿಗಳನ್ನು ತೋರಿಸುವಂತೆ ಸಿದ್ಧಪಡಿಸುವುದು ಅಗತ್ಯ. ಹಿಂದಿನ ಸಾಲಿನ ಜವಾಬ್ದಾರಿಗಳ ನಿರ್ವಹಣೆ, ಕೊಡಬೇಕಾದ ಬಾಕಿಗಳು, ಬರಬೇಕಾದ ಬಾಕಿಗಳು, ಸಾಲಗಳು, ಸಾಲದ ಮೇಲಿನ ಬಡ್ಡಿಗಳು, ಹೂಡಿಕೆಗಳು, ಹೂಡಿಕೆ ಮೇಲಿನ ಬಡ್ಡಿಗಳು, ಕಳೆದ ಸಾಲಿನ ಲಾಭ ವಿಲೇವಾರಿ ಕ್ರಮ, ಕಳೆದ ಸಾಲಿನ ನಷ್ಟ, ನಷ್ಟ ಸರಿದೂಗಿಸಲು ತೆಗೆದುಕೊಂಡ ಕ್ರಮ, ಅವುಗಳನ್ನು ಹೊಂದಾಣಿಕೆ ಮಾಡುವಲ್ಲಿ ತೆಗೆದುಕೊಂಡ ಕ್ರಮಗಳು, ಬಾಡಿಗೆ ಬರುವುದು ಅಥವಾ ಕೊಡಬೇಕಿರುವುದು, ಸಂಬಳ ಪಾವತಿಸಿರುವುದು, ಪಾವತಿಸಲು ಬಾಕಿ ಇರುವುದು, ಸಭೆ ವೆಚ್ಚಗಳು, ಇತರೆ ಸಾದಿಲ್ವಾರ ವೆಚ್ಚಗಳು ಹೀಗೆ ಹಲವಾರ ಆದಾಯ ಮತ್ತು ವೆಚ್ಚಗಳನ್ನು ವಿಂಗಡಿಸಿ ವ್ಯಾಪಾರ ಖಾತೆಯನ್ನು ಸಿದ್ಧಪಡಿಸಿ ನಂತರ ಲಾಭ ನಷ್ಟ ಖಾತೆಯನ್ನು ಸಿದ್ಧಪಡಿಸಿ ನಂತರದಲ್ಲಿ ಆಸ್ತಿ ಜವಾಬ್ದಾರಿ ತಃಖ್ತೆಯನ್ನು ಸಿದ್ಧಪಡಿಸುವುದು ಕ್ರಮ. ಇದಾದ ಮೇಲೆ ಸಂಸ್ಥೆ ಲಾಭದಲ್ಲಿದೆಯೂ ಅಥವಾ ನಷ್ಟದಲ್ಲಿದೆಯೂ ಗೊತ್ತಾಗುತ್ತದೆ.

ಸಂಸ್ಥೆಯ ನೈಜ ಚಿತ್ರಣವನ್ನು ತೋರಿಸುವುದು ಸಂಸ್ಥೆಯ ಅಂತಿಮ ಲೆಕ್ಕ ಪತ್ರಗಳು. ಯಾವುದೂ ಪಟ್ಟ ಭದ್ರ ಹಿತಾಸಕ್ತಿಗಾಗಿ ಸಂಸ್ಥೆಯ ನಷ್ಟಗಳನ್ನು ಮುಚ್ಚಿಟ್ಟು ಬಾರದಿರುವ ಬಾಕಿಗಳನ್ನು ಆಸ್ತಿಯನ್ನು ಬರುವುದೆಂದು ಪರಿಗಣಿಸಿ ಸಂಸ್ಥೆಯನ್ನು ಸುಳ್ಳು ಲಾಭದಲ್ಲಿ ತೋರಿಸುವುದು ಅಕ್ಷಮ್ಯ ಅಪರಾಧವಾಗುತ್ತದೆ ಅದು ಮೋಸವೆಂದು ಪರಿಗಣಿಸಲಾಗುತ್ತದೆ. ದೇಶದಲ್ಲಿ ಅನೇಕ ಕಂಪನಿಗಳು ಬ್ಯಾಂಕುಗಳು, ಸಹಕಾರಿಗಳು ಮುಳುಗಿರುವುದನ್ನು ಹಾಗೂ ಗ್ರಾಹಕರಿಗೆ ಮೋಸ ಅನ್ಯಾಯ ಮಾಡಿರುವ ಅನೇಕ ಉದಾಹರಣೆಗಳನ್ನು ನೋಡಬಹುದಾಗಿದೆ. ನೂರಾರು ವರ್ಷಗಳ ಇತಿಹಾಸ ಇರುವ ಹಾಗೂ ಅತ್ಯಂತ ಉತ್ತಮವಾಗಿ ನಡೆದು ಬಂದಿದ್ದ ಸಹಕಾರ ಸಂಸ್ಥೆಗಳು ಮುಚ್ಚಿ ಸಮಾಪನವಾಗಿರುವುದು, ಸಮಾಪನೆಗೆ ಹೋಗುವ ಹಂತ ತಲುಪಿರುವುದು ಹಾಗೂ ಬೇರೊಂದು ಸಹಕಾರ ಸಂಸ್ಥೆಗೆ ಬ್ಯಾಂಕಿಗೆ ವಿಲೀನಕ್ಕೆ ಹೋಗುತ್ತಿರುವುದು ಕಂಡು ಬರುತ್ತಿದೆ. ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ. ಸಮಾಜದ ಕಟ್ಟ ಕಡೆಯ ವ್ಯಕ್ತಿ ಶ್ರೀ ಸಾಮಾನ್ಯರಿಗೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸುವ ಕ್ಷೇತ್ರ ಇದಾಗಿರುವುದರಿಂದ ಈ ಕ್ಷೇತ್ರವನ್ನು ಬಲಪಡಿಸುವುದು ಅತ್ಯಂತ ಅಗತ್ಯವಾಗುತ್ತದೆ. ಮಾರ್ಚ 31ಕ್ಕೆ ಅಂತ್ಯವಾಗುವಂತೆ ಎಲ್ಲ ಸಹಕಾರಿ ಸಂಸ್ಥೆಗಳು ಪಾರದರ್ಶಕವಾಗಿ ಸಕಾಲದಲ್ಲಿ ಲೆಕ್ಕಪತ್ರಗಳನ್ನು ಅಂತಿಮಗೊಳಿಸಬೇಕು.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಜ್ಞಾನದ ಹಸಿವು"

ಬದುಕು ಒಂದು ಪವಿತ್ರ ಅನುಭವ, ನೋಡುವುದು, ಕೇಳುವುದು ಮಾತನಾಡುವುದು ವಿಚಾರ ಮಾಡುವುದು ಇವುಗಳ ಮೊತ್ತವೇ ಬದುಕು. ಸುಂದರ ವಸ್ತುಗಳನ್ನು ತೋರಿಸುವ ಕಣ್ಣುಗಳು; ಮಧುರ ಶಬ್ಧಗಳನ್ನು ಕೇಳಿಸುವ ಕಿವಿಗಳು; ಒಳ್ಳೆಯ ಕಾರ್ಯಗಳನ್ನು ಮಾಡಿಸುವ ಕೈಗಳು ಬದುಕನ್ನು ಸುಂದರಗೊಳಿಸುತ್ತವೆ.

ನಾವು ಭೂಮಿಗೆ ಬಂದದ್ದು ಸಂತೃಪ್ತಿಯಿಂದ ಬದುಕಲು, ಆದರೆ ನಾವು ಅದನ್ನೇ ಮರೆಯುತ್ತಿದ್ದೇವೆ. ನಮ್ಮ ಬದುಕು ನಮಗೆ ತೃಪ್ತಿ ಕೊಡುವಂತಿರಬೇಕು. ಈ ಬದುಕಿನಲ್ಲಿ ನಾವು ಏನು ಪಡೆಯುತ್ತೇವೆ ಎನ್ನುವುದು ಮಹತ್ವದ್ದಲ್ಲ. ಹೇಗೆ ಬದುಕುತ್ತೇವೆಂಬುದು ಮಹತ್ವದ್ದು. ಆದರೆ ಮನುಷ್ಯ ಬದುಕಿಗಿಂತ ಉಳಿದ ಸಂಗತಿಗಳಿಗೆ ಹೆಚ್ಚು ಮಹತ್ವ ಕೊಡುತ್ತಿದ್ದಾನಾದುದರಿಂದ ಅನೇಕ ಸಮಸ್ಯೆಗಳು ಹುಟ್ಟುತ್ತಿವೆ. ಬಡತನವಿರಲಿ ಅಥವಾ ಶ್ರೀಮಂತಿಕೆಯಿರಲಿ – ಅದು ಮಹತ್ವದ್ದಲ್ಲ. ಬದುಕು ಅವೆಲ್ಲವುಗಳಿಗಿಂತ ದೊಡ್ಡದು. ಬದುಕಿನ ಮಹತ್ವವನ್ನು ಅರಿತ ಒಬ್ಬ ಋಷಿಗಳು 'ಜಿಜೀವಿಷೇತ್ ಶತಂ ಸಮಾಃ ಎಂದು ಹೇಳಿದ್ದಾರೆ. ಅಂದರೆ ಮನುಷ್ಯನೇ ನೂರು ಸುಂದರ ಶರದ್ ಋತುಗಳನ್ನು ಬಾಳು.

ಮಾನವ ಸಂತೋಷದಿಂದ ಬದುಕುವುದನ್ನು ದೀಪವನ್ನು ನೋಡಿ ಕಲಿಯಬೇಕು. ಆ ದೀಪದ ಪಣತೆ ಬಂಗಾರದ್ದಿರಬಹುದು. ಬೆಳ್ಳಿಯದ್ದಿರ ಬಹುದು ಇಲ್ಲವೇ ಮಣ್ಣಿನದ್ದಿರಬಹುದುಃ ಇಲ್ಲ ದೀಪ ಮಹತ್ವನೇ ವಿನಃ ಪಣತೆಯಲ್ಲ. ಪಣತೆ ಯಾವುದಿದರೇನು? ದೀಪ, ಅದರ ಬೆಳಕು ಎಲ್ಲದರಲ್ಲೂ ಸಮಾನ. ದೀಪವಿರದ್ದರೆ ಪಣತೆ ಯಾವುದಿದ್ದರೇನು? ಎಲ್ಲವೂ ನಿರುಪಯುಕ್ತ. ಮನುಷ್ಯನೂ ಸಂತೋಷದಿಂದ ಬಾಳಬೇಕು. ಸಂತೋಷವೇ ಇರದಿದ್ದರೆ ಏನಿದ್ದೇನು ಪ್ರಯೋಜನ!

ಈ ಭೂಮಿ, ನೀರು, ಗಾಳಿ ಇರುವುದು ಮನುಷ್ಯ ಅವುಗಳನ್ನು ಬಳಿಸಿಕೊಂಡು ಸುಂದರವಾಗಿ ಬಾಳಲೆಂದು, ಬದುಕಲು ಕೆಲವು ಮಹತ್ವ ಸಂಗತಿಗಳು ಮಾನವನಿಗೆ ಬೇಕು. ಅದರಲ್ಲಿ ಮುಖ್ಯವಾದುದೆಂದರೆ ಜ್ಞಾನ, ಜ್ಞಾನ ಕುರಿತಂತೆ ಒಂದು ಸುಂದರ ಮಾತಿದೆ. "ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ" (ಜ್ಞಾನದಂತಹ ಪವಿತ್ರವಾದ ವಸ್ತು ಈ ವಿಶ್ವದಲ್ಲಿ ಮತ್ತೊಂದಿಲ್ಲ).

ಜ್ಞಾನ ಎಂದರೆ ಕೇವಲ ಓದಿ ಪಡೆದದ್ದಲ್ಲ. ಬದುಕನ್ನು ಸುಂದರಗೊಳಿಸುವುದೆಲ್ಲವೂ ಜ್ಞಾನವೇ, ಇಂಗ್ಲೇಂಡ್ ದೇಶ್ವ ಫ್ರಾನ್ಸಿಸ್ ಬೇಕನ್ ಒಬ್ಬ ತತ್ವಜ್ಞಾನಿ, ಚಿಂತಕ, ಜ್ಞಾನವನ್ನು ಕುರಿತು ಅವನು "knowledge itself is power" ಎಂದು ಹೇಳಿದ್ದಾನೆ. ಎಂತಹ ಸುಂದರ ಮಾತು! ಮನುಷ್ಯನ ಸಾಮರ್ಥ್ಯ ಹೆಚ್ಚಿಸುವುದು ಈ ಜ್ಞಾನ. ಜ್ಞಾನ ಮಾಡುವ ಕೆಲಸ ಅದ್ಭುತ, ಕೈ ಶಕ್ತಿ ಬೇರೆ, ತಲೆಯ ಶಕ್ತಿ ಬೇರೆ, ಕೈಗಿಂತ ತಲೆ ಮಾಡುವ ಕೆಲಸ ಅದ್ಭುತ. ಕೈ ಹೆಚ್ಚೆಂದರೆ ಹತ್ತು ಕಿಲೋ ಇಲ್ಲವೇ ನೂರು ಕಿಲೋ ಭಾರವನ್ನು ಎತ್ತಬಹುದು. ಆದರೆ ಸಾವಿರಾರು ಕಿಲೋ ಭಾರವನ್ನು ಹೊತ್ತ ವಿಮಾನ ಆಕಾಶದಲ್ಲಿ ಹಕ್ಕಿಯಂತೆ ಹಾರಬಲ್ಲದು, ಇದು ತಲೆಯ ಶಕ್ತಿ, ಬುದ್ಧಿಯ ಸಾಮರ್ಥ್ಯ.

ಹಿಂದೆ ಭಾರತದಲ್ಲಿ ಪ್ಲೇಗ್, ಕಾಲರಾ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳಿಂದ ಸಾವಿರಾರು ಜನರು ಮರಣವನ್ನಪ್ಪುತ್ತಿದ್ದರು. ಊರಿಗೆ ಊರೇ ಸ್ಮಶಾನ ಸದೃಶವಾಗಿರುತ್ತಿತ್ತು. ಎಲ್ಲೆಡೆ ಭಯಂಕರ ಮೃತ್ಯು ತಾಂಡವವಾಡುತ್ತಿತ್ತು. ಆಗ ಒಬ್ಬ ವಿಜ್ಞಾನಿ ತನ್ನ ಜ್ಞಾನವನ್ನು ಉಪಯೋಗಿಸಿ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿದ. ಅವನು ಕಂಡುಹಿಡಿದ ಲಸಿಕೆ ಸಾವಿರಾರು ಜನರ ಪ್ರಾಣ ಉಳಿಸಿತು. ಈ ಮಹಾನ್ ವಿಜ್ಞಾನಿ ಹಾಫ್ಕಿನ್. ಅವನ ಜ್ಞಾನ ಜನರಿಗೆ ಜೀವವನ್ನು ಕೊಟ್ಟಿತು. ಜ್ಞಾನದ ಶಕ್ತಿ ಅದ್ಭುತವಾದುದು.

ಮನುಷ್ಯ ಜ್ಞಾನವನ್ನು ಪ್ರೀತಿಸಬೇಕು. ಹನ್ನೆರಡನೇ ಶತಮಾನದಲ್ಲಿ ಜೇಡರದಾಸಿಮಯ್ಯ ಎಂಬುವನು. "ಭಗವಂತನೇ ನನಗೆ ಏನನ್ನೂ ಕೊಡಬೇಡ ಒಂದಿಷ್ಟು ಕೊಡು" ಎಂದು ಕೇಳುತ್ತಾನೆ. ತಲೆಯಲ್ಲಿ ಕತ್ತಲಿದ್ದರೆ ಎಷ್ಟು ಸಂಪತ್ತು, ಐಶ್ವರ್ಯಗಳಿದ್ದರೂ ವ್ಯರ್ಥ. ಒಂದು ಅರಮನೆಯಂತಹ ಮನೆ, ಆ ಮನೆಯಲ್ಲಿ ಸುಂದರವಾದ ಬೆಲೆಬಾಳುವ ವಸ್ತುಗಳು, ಆಧುನಿಕ ಪೀಠೋಪಕರಣಗಳು, ಇಷ್ಟೆಲ್ಲ. ಇದ್ದೂ ಒಂದು ದೀಪ ಇರದಿದ್ದರೆ? ದೀಪಕ್ಕೆ ಬೆಲೆಯಿಲ್ಲ. ಆದರೆ ಅದಿಲ್ಲದಿದ್ದರೆ ಉಳಿದವುಗಳಿಗೆಲ್ಲಾ ಇರುವ ಮಹತ್ವ ತಿಳಿಯುವುದಿಲ್ಲ. ನಮ್ಮೊಳಗಿರುವ ಜ್ಞಾನವೇ ಇಲ್ಲಿ ದೀಪ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 33,599 ಆಗಿರುತ್ತದೆ. ಇವುಗಳ ಪೈಕಿ 24,086 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,513

**ಫೆಬ್ರವರಿ ತಿಂಗಳ ಪ್ರಕರಣಗಳು :** ದಾವಾಪ್ರಕರಣ 732 ಇತ್ಯರ್ಥಗೊಂಡ ಪ್ರಕರಣಗಳು 735

**ಅಮಲ್ಜಾರಿ ಪ್ರಕರಣಗಳು :** ಒಟ್ಟು 8,714 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,626 ಪ್ರಕರಣಗಳು ಇತ್ಯರ್ಥಗೊಂಡಿದ್ದು, 7,088 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಫೆಬ್ರವರಿ ತಿಂಗಳಿನಲ್ಲಿ ಒಟ್ಟು 362 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## ಸನ್ಮಾನ




**ಬೆಂಗಳೂರು** : Karnataka state chartered accountants association ಇದರ 36th annual conference ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರಾಗಿ ಶ್ರೀ ಜಿ ನಂಜನಗೌಡ ಇವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಇಸ್ರೋ ಮಾಜಿ ಅಧ್ಯಕ್ಷರಾದ ಶ್ರೀ ಎ ಎಸ್ ಕಿರಣ್ ಕುಮಾರ ಉಪಸ್ಥಿತರಿದ್ದರು.

## ಸುವರ್ಣ ಮಹೋತ್ಸವ




**ಧಾರವಾಡ** : ಧಾರವಾಡ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಭಾಗವಹಿಸಿದ ಈ ಚಿತ್ರದಲ್ಲಿ ಪೂಜ್ಯ ಶ್ರೀ ಸಿದ್ಧ ಶಿವಯೋಗಿ ಸಿದ್ಧಾಶ್ರಮ ದೇವರ ಹುಬ್ಬಳ್ಳಿ ಹಾಗೂ ಸಹಕಾರಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಗಳ ನೇಮಕ

### ಸಂಯುಕ್ತ ಸಹಕಾರಿಯ ಬೆಂಗಳೂರು ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಯಾಗಿ ಶ್ರೀಮತಿ ಗಗನ ಕೆ, ಸಹಕಾರ ಸಂಘಗಳ ಉಪ ನಿಬಂಧಕರು ಇವರು ಅಧಿಕಾರ ಸ್ವೀಕಾರ



**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ದಾವ ಪಂಚಾಯತಿ ನ್ಯಾಯಾಲಯದ (441) ಬೆಂಗಳೂರು ಇದರ ನೂತನ ಪೀಠಾಧಿಕಾರಿಯಾಗಿ ಶ್ರೀಮತಿ ಗಗನ ಕೆ ರವರು ಅಧಿಕಾರವನ್ನು ವಹಿಸಿಕೊಂಡರು ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಹೂಗುಚ್ಛ ನೀಡುವ ಮೂಲಕ ಸ್ವಾಗತವನ್ನು ಕೋರಿದರು. ಈ ಸಂದರ್ಭದಲ್ಲಿ ಉಪ ಪ್ರಧಾನ ವ್ಯವಸ್ಥಾಪಕಿಯಾದ ಶ್ರೀಮತಿ ಶೋಭಾ ಆರ್ ಹಾಗೂ ನ್ಯಾಯಾಲಯದ ಸಿಬ್ಬಂದಿಗಳು ಹಾಜರಿದ್ದರು



### ಸಂಯುಕ್ತ ಸಹಕಾರಿಯ ಬೆಳಗಾವಿ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಯಾಗಿ ರವೀಂದ್ರ ಪರಸಗೌಡ ಪಾಟೀಲ, ಸಹಕಾರ ಸಂಘಗಳ ಉಪ ನಿಬಂಧಕರು ಇವರು ನೇಮಕ

**ಬೆಳಗಾವಿ** : ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯ ಬೆಳಗಾವಿ ಇದಕ್ಕೆ ಪೀಠಾಧಿಕಾರಿಗಳಾಗಿ ಶ್ರೀ ರವೀಂದ್ರ ಪರಸಗೌಡ ಪಾಟೀಲ ಇವರನ್ನು ನೇಮಕಾತಿ ಮಾಡಿ ಸರ್ಕಾರ 01ನೇ ಮಾರ್ಚ್ 2024ರಂದು ಆದೇಶ ಹೊರಡಿಸಿದೆ.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು




ಸಹಕಾರದಿಂದ ಮಾತ್ರ ಸಮೃದ್ಧಿ ಸಾಧ್ಯ – ಜ್ಯಾಂತಿಕರ್.

**ಬೀದರ :** ದೇಶವು ವಿಶ್ವದ ಆರ್ಥಿಕ ಕ್ಷೇತ್ರದಲ್ಲಿ ಮೂರನೆ ರಾಷ್ಟ್ರವಾಗಿ ಮುನ್ನುಗುತ್ತಿದೆ. ದೇಶದ ಆರ್ಥಿಕತೆಯಲ್ಲಿ ಸಹಕಾರಿಗಳ ಪಾಲು ಹೆಚ್ಚಿನದಾಗಿದು ಪ್ರತಿಯೊಂದು ಕ್ಷೇತ್ರದಲ್ಲಿ ಸಹಕಾರವು ತನ್ನ ಸೇವೆಯನ್ನು ನೀಡುತ್ತಿದೆ. ಆದರಿಂದ ಸಹಕಾರದಿಂದ ಮಾತ್ರ ಸಮೃದ್ಧಿ ಸಾಧ್ಯವೆಂದು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ ತಿಳಿಸಿದರು. ನಗರದ ಸಹಕಾರ ಗ್ರಾಮೀಣ ಆಕಾಡೇಮಿ (ಸಹಾರ್ದಾ) ತರಬೇತಿ ಸಂಸ್ಥೆಯಲ್ಲಿ ರಾಷ್ಟ್ರೀಯ ಸಹಕಾರ ಯುನಿಯನ್ ನವ ದೆಹಲಿ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟ ನಿ., ಬೀದರ ಇವರುಗಳ ಸಂಯುಕ್ತ ಆಶ್ರೇಯದಲ್ಲಿ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಆಯೋಜಿಸಿದ ನಾಯಕತ್ವ ಅಭಿವೃದ್ಧಿ ತರಬೇತಿದಾರರ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ಸಹಕಾರ ಯುನಿಯನ್ ನವ ದೆಹಲಿ ನಿವೃತ ನಿರ್ದೇಶಕರಾದ ಡಾ. ಎ.ಆರ್ ಶ್ರೀನಾಥ ಮಾತನಾಡಿ ಕೇಂದ್ರ ಸರ್ಕಾರವು ಸಹಕಾರ ಇಲಾಖೆಯ ಮೂಲಕ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ವಿಶ್ವದ ನಾನಾ ದೇಶಗಳು ಭಾರದ ರಾಷ್ಟ್ರೀಯ ಸಹಕಾರ ಯುನಿಯನ್ ಜೋತೆಗೊಡಿ ಸಹಕಾರ ಕ್ಷೇತ್ರದಲ್ಲಿ ಅನೇಕ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಸಹಕಾರ ಎಂದರೆ ಕೇವಲ ಪತ್ತಿನ ವ್ಯವಹಾರ ಅಲ್ಲದೇ ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಹಕಾರ ಇಲಾಖೆಯ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿನ ಯೋಜನೆಗಳನ್ನು ಸದುಪಯೋಗ ಪಡೆದುಕೊಳ್ಳಲು ವಿನಂತಿಸಿದರು.



**ಕಲಬುರಗಿ :** ದಿನಾಂಕ 06.02.2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಮತ್ತು ಸಿಬ್ಬಂದಿಗಳಿಗೆ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೆಯ ಕುರಿತು ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಸಂಜಯ ಕಪೂರರವರು ನೆರವೇರಿಸಿದರು.



**ರಾಯಚೂರು :** ದಿನಾಂಕ 07.02.2024 ರಂದು ಬೆಳಿಗ್ಗೆ 10 ಗಂಟೆಯಿಂದ 1.30ರವರೆಗೆ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳು ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಹೋಟೇಲ್ ರಾಜ್ ಮಹಲ್ ಸಿಂಧನೂರುನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಮಂಜುಳಾ ಪಾಟೀಲರವರು ಮತ್ತು ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ

ಒಕ್ಕೂಟದ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಪ್ಪ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ರಾಜಶೇಖರ ಬಿಯವರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಉಪಸ್ಥಿತರಿದ್ದರು.

**ರಾಯಚೂರು** : ದಿನಾಂಕ 07.02.2024 ರಂದು ಮಧ್ಯಾಹ್ನ 3.00 ಗಂಟೆಗೆ ರಾಯಚೂರು ಜಿಲ್ಲೆಯ ಮಸ್ಕಿ. ಲಿಂಗಸೂಗುರು ತಾಲೂಕುಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳು ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ರಡ್ಡೆರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗುರು ಸಹಕಾ–ರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಸ್ಕಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರತಾಪ ಗೌಡ ಪಾಟೀಲರವರು, ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರಡ್ಡೇರ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಮಾರೆಪ್ಪರವರು ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ವೇದಿಕೆ ಮೇಲೆ ಉಪಸ್ಥಿತರಿದ್ದರು.



**ರಾಯಚೂರು** : ದಿನಾಂಕ 08.02.2024 ರಂದು ಬೆಳಿಗ್ಗೆ 10.00 ಗಂಟೆಗೆ ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಮಾನವಿ ಮತ್ತು ಸಿರವಾರ ತಾಲೂಕಿನ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರು ಹಕ್ಕು ಮತ್ತು ಕರ್ತವ್ಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಗಾಂಧಿ ಕಾಲೇಜ ಸಭಾಂಗಣ ಮಾನವಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರಾದ ಶ್ರೀ ಮಲ್ಲನಗೌಡ ಪಾಟೀಲ ರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮಾನವಿ ಪಟ್ಟಣದ ಸಹಕಾರ ಬ್ಯಾಂಕನ ಉಪಾಧ್ಯಕ್ಷರಾದ ಡಾ॥ ಶ್ರೀಮತಿ ರೋಹಿಣಿಯವರು ಆಗಮಿಸಿದ್ದರು.

**ರಾಯಚೂರು** : ದಿನಾಂಕ 08.02.2024 ರಂದು ಮಧ್ಯಾಹ್ನ 3.00 ಗಂಟೆಗೆ ರಾಯಚೂರು ಜಿಲ್ಲೆಯ ರಾಯಚೂರು ಮತ್ತು ದೇವದುರ್ಗ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರು ಹಕ್ಕು ಮತ್ತು ಕರ್ತವ್ಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಸಭಾಂಗಣ, ಕೃಷಿ ವಿಶ್ವವಿದ್ಯಾಲಯ ಆವರಣ ರಾಯಚೂರುನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಹೊರನಾಡು ಅನ್ನಪೂರ್ಣೇಶ್ವರಿ ವಿವಿದ್ದೋದ್ಧೇಶ ಸೌಹಾರ್ದ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ವೆಂಕಟರಾಯ ಗೌಡ ಬೆನಕನರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು.



**ಉಡುಪಿ** : ದಿನಾಂಕ 23.02.2024 ರಂದು ಉಡುಪಿ ಜಿಲ್ಲೆಯ ಉಡುಪಿ ಮತ್ತು ಕಾಪು ತಾಲ್ಲೂಕಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಜಿಲ್ಲಾ ಕಛೇರಿಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಭಾಗವಹಿಸಿದ್ದರು. ಸಭೆಯಲ್ಲಿ ಸಹಕಾರಿಗಳ ನಷ್ಟಕ್ಕೆ ಕಾರಣ ಮತ್ತು ಆ ನಷ್ಟದಿಂದ ಹೊರಬರಲು ಸಹಕಾರಿಗಳು ಅನುಸರಿಸಬೇಕಾದ ಕ್ರಮಗಳು ಮತ್ತು ಕಾರ್ಯಯೋಜನೆಗಳ ಕುರಿತು ಚರ್ಚಿಸಲಾಯಿತು.



**ದಾವಣಗೆರೆ** : ದಿನಾಂಕ 22.02.2024ರಂದು ದಾವಣಗೆರೆ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಯಾದ ಜಂಗಮ ಸೌಹಾರ್ದ ಸಹಕಾರಿ ನಿ, ದಾವಣಗೆರೆ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಇವರನ್ನು ಭೇಟಿ ಮಾಡಿ ಸಂಯುಕ್ತ ಸಹಕಾರಿಯು ನೀಡಿರುವ ನಿರ್ದೇಶನದ ಕುರಿತು ಪ್ರಸ್ತಾಪ ಮಾಡಿ ಸದರಿಯವರ ಪ್ರಸ್ತಾಪಕ್ಕೆ ಮಾನ್ಯ ಅಧ್ಯಕ್ಷರು ಸಂಯುಕ್ತ ಸಹಕಾರಿಯ ನಿರ್ದೇಶನವನ್ನು ಕಡ್ಡಾಯವಾಗಿ ಪಾಲಿಸಿ ಜಾರಿಗೊಳಿಸಬೇಕೆಂದು ತಿಳಿಸಿ ಕೆಲವು ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ವ್ಯವಸ್ಥಾಪಕರಾದ ಶ್ರೀ ಶಶಿಕುಮಾರ್ ಎಸ್. ಇವರು ಉಪಸ್ಥಿತರಿದ್ದರು.

## ಕೆನ್ನಮೆಟಲ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯವರಿಗೆ 1 ದಿನದ ವಿಶೇಷ ತರಬೇತಿ



**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಯೋಗದೊಂದಿಗೆ ಕೆನ್ನಮೆಟಲ್ ಇಂಡಿಯಾ ಎಂಪ್ಲಾಯಿಸ್ ಸೌಹಾರ್ದ ಕ್ರೆಡಿಟ್ ಸಹಕಾರಿಯ ನಿರ್ದೇಶಕರುಗಳಿಗಾಗಿ ದಿನಾಂಕ 25 ಫೆಬ್ರವರಿ 2024 ಭಾನುವಾರದಂದು ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮವನ್ನು "ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡರಸ್ತೆ ಮಾರ್ಗೋಸ ರಸ್ತೆ, ಮಲ್ಲೇಶ್ವರಂ ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಗಿಡಕ್ಕೆ ಜಲಾಧಾರೆ ಮಾಡುವ ಮೂಲಕ ಮಾನ್ಯ ಅಪರ ನಿಬಂಧಕರಾದ (ನಿ) ಶ್ರೀ ಹೆಚ್ ಎಸ್ ನಾಗರಾಜಯ್ಯ ರವರು ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ನೆರವೇರಿಸಿದರು.

ಸದರಿ ತರಬೇತಿಯಲ್ಲಿ "ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು", ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು" ಹಾಗೂ "ಸಭೆಗಳು – ಆಡಳಿತ ಮಂಡಳಿ ಸಭೆ – ವಾರ್ಷಿಕ ಸಾಮಾನ್ಯ ಸಭೆ, ಉಪಸಮಿತಿ ಸಭೆಗಳು ವಿಶೇಷ ಮಹಾಸಭೆಗಳು– ಕೋರಂ ನಡವಳಿಕೆಗಳ ದಾಖಲಿಸುವುದು ಈ ವಿಷಯಗಳ ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿದೆ. ಸದರಿ ತರಬೇತಿಯಲ್ಲಿ ಕೆನ್ನಮೆಟಲ್ ಇಂಡಿಯಾ ಎಂಪ್ಲಾಯಿಸ್ ಸೌಹಾರ್ದ ಕ್ರೆಡಿಟ್ ಸಹಕಾರಿಯ 12 ಜನ ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿರುತ್ತಾರೆ.

ಈ ರೀತಿಯ ತರಬೇತಿಯ ಅವಶ್ಯಕೆಗಳಿದ್ದಲ್ಲಿ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.



**ಕಲಬುರಗಿ** : ದಿನಾಂಕ 21.02.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟ್ಯಾಂಪ್ ಕೇಂದ್ರ ಹೊಂದಿರುವ ಸಿಬ್ಬಂದಿಗಳಿಗೆ ತರಬೇತಿ ಪ್ರಾಂತೀಯ ಕಛೇರಿ ಕಲಬುರಗಿ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಮುದ್ರಾಂಕ ಇಲಾಖೆಯ ಹಿರಿಯ ನೋಂದಣಾಧಿಕಾರಿಗಳಾದ ಶ್ರೀಮತಿ ಅನುರಾಧ ಕಿನಾಳರವರು ವಹಿಸಿದ್ದರು. ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ನುಡಿದರು. ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಕೋರಿದರು. ವಂದನಾರ್ಪಣೆಯನ್ನು ಕೇಂದ್ರ ಕಛೇರಿಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರರಾವ ಸಿಂಧೆ ರವರು ನೆರವೇರಿಸಿದರು. ಇ–ಸ್ಟ್ಯಾಂಪ ಅನುಚ್ಛೇಧಗಳ ತಿದ್ದುಪಡಿಗಳ ಕುರಿತು ಮತ್ತು ಪರಿಷ್ಕರಣೆಯ ಶುಲ್ಕದ ಕುರಿತು ಮುದ್ರಾಂಕ ಇಲಾಖೆಯ ಹಿರಿಯ ಉಪನೋಂದಣಾಧಿಕಾರಿಗಳಾದ ಶ್ರೀಮತಿ ಅನುರಾಧ ಕಿನಾಳ ರವರು ಮಾಹಿತಿ ನೀಡಿದರು. ನಂತರ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆಯವರು ಇ–ಸ್ಟ್ಯಾಂಪ್ ಕಾರ್ಯನಿರ್ವಹಣೆಯ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 3 ಜಿಲ್ಲೆಗಳಿಂದ 52 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಕ್ಲಸ್ಟರ್ ತರಬೇತಿ

**ಮೈಸೂರು :** ದಿನಾಂಕ 22.02.2024 ರ ಗುರುವಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಮೈಸೂರು ಪ್ರಾಂತ್ಯದ ಮೈಸೂರು ಜಿಲ್ಲೆಯ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ ವನ್ನು ಪ್ರಾಂತೀಯ ಕಛೇರಿಯಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಮಾನ್ಯ ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್. ಚಂದ್ರಶೇಖರ್ ರವರು ಉಪಸ್ಥಿತರಿದ್ದರು. ಮೈಸೂರು,ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಭಗೀರಥ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಜವಾಹರ ಮುಗ್ಗನವರ ನೆರವೇರಿಸಿದರು.

**ಕೊಡಗು :** ದಿನಾಂಕ 23.02.2024 ರ ಶುಕ್ರವಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಮೈಸೂರು ಪ್ರಾಂತ್ಯದ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ ವನ್ನು ಕೊಡವ ಎಂಟರಪ್ರೆನ್ಯೂರ್ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಲಿ., ಮಡಿಕೇರಿ ಕಛೇರಿಯಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಮಾನ್ಯ ನಿವೃತ್ತ ಹಿರಿಯ ಲೆಕ್ಕ ಪರಿಶೋಧಕರಾದ ಶ್ರೀ ಸಿರಿಲ್ ಮೊರಾಸ್ ರವರು ಉಪಸ್ಥಿತರಿದ್ದರು. ಮೈಸೂರು,ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಸಿ.ಡಿ ಕಾಳಪ್ಪ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಜವಾಹರ ಮುಗ್ಗನವರ ನೆರವೇರಿಸಿದರು.

**ಹಾಸನ :** ದಿನಾಂಕ: 23.02.2024ರ ಶುಕ್ರವಾರದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.," ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಆಡಳಿತ ಮಂಡಳಿ ಕಛೇರಿಯಲ್ಲಿ ಆಯೋಜಿಸಲಾಗಿತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ಎಂ. ಚಂದ್ರಶೇಖರಯ್ಯ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶೇಖರ್ .ಪಿ" ಮೈಸೂರು ಶಾಖಾ ವ್ಯವಸ್ಥಾಪಕರು, ದಿ ಪಾವಗಡ ಮಲ್ಟಿಪರ್ಪಸ್ ಕೋ– ಆಪ್ ಸೊಸೈಟಿ ಲಿ., ಇವರು ಮಾರ್ಗದರ್ಶನ ಮಾಡಿದರು. ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇದರ ನಿರ್ದೇಶಕರಾದ ಶ್ರೀ ಪರಮೇಶ್ವರಪ್ಪ ರವರು ಮತ್ತು ಸದಸ್ಯರಾದ ಶ್ರೀ ಬಾಲಚಂದ್ರ ರವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

**ಮಂಡ್ಯ :** ದಿನಾಂಕ: 27.02.2024ರ ಮಂಗಳವಾರದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.," ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪ್ ಸೊ ಲಿ., ಇದರ ಮಂಡ್ಯ ಶಾಖೆಯ ಕಛೇರಿಯಲ್ಲಿ ಆಯೋಜಿಸಲಾಗಿತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶೇಖರ್ .ಪಿ" ಮೈಸೂರು ಶಾಖಾ ವ್ಯವಸ್ಥಾಪಕರು, ದಿ ಪಾವಗಡ ಮಲ್ಟಿಪರ್ಪಸ್ ಕೋ– ಆಪ್ ಸೊಸೈಟಿ ಲಿ., ಇವರು ಮಾರ್ಗದರ್ಶನ ಮಾಡಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ವೆಂಕಟೇಶ ಗೌಡ ರವರು, ಅಧ್ಯಕ್ಷರು, ಭೈರವ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಮತ್ತು ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ವೇದಿಕೆ ಮೇಲೆ ಉಪಸ್ಥಿತರಿದ್ದರು.

**ಚಾಮರಾಜನಗರ :** ದಿನಾಂಕ: 28.02.2024ರ ಬುಧವಾರ ದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.," ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇದರ ಕಛೇರಿ ಸಭಾಂಗಣದಲ್ಲಿ ಆಯೋಜಿಸಲಾಗಿತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶೇಖರ್. ಪಿ" ಮೈಸೂರು ಶಾಖಾ ವ್ಯವಸ್ಥಾಪಕರು, ದಿ ಪಾವಗಡ ಮಲ್ಟಿಪರ್ಪಸ್ ಕೋ– ಆಪ್ ಸೊಸೈಟಿ ಲಿ., ಇವರು ಮಾರ್ಗದರ್ಶನ ಮಾಡಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ

ವೀರಪ್ಪ .ಪಿ ರವರು, ಅಧ್ಯಕ್ಷರು, ಶ್ರೀ ಮಲೆ ಮಹದೇಶ್ವರ ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ಸಂಘ ನಿ., ಹನೂರು ಮತ್ತು ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ವೇದಿಕೆ ಮೇಲೆ ಉಪಸ್ಥಿತರಿದ್ದರು.

**ಚಿಕ್ಕಮಗಳೂರು :** ದಿನಾಂಕ 01.03.2024ರ ಶುಕ್ರವಾರದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.," ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿ ಕಛೇರಿಯಲ್ಲಿ ಆಯೋಜಿಸಲಾಗಿತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುಧೀರ್ ಮುಖ್ಯ ಕಾರ್ಯನಿರ್ವಾಹಕರು ಯಡಗೆರೆ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇವರು ಮಾರ್ಗದರ್ಶನ ಮಾಡಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶಿವಕುಮಾರ ಎ ಇವರು ನೆರವೇರಿಸಿದರು.

## ಇ–ಸ್ಟಾಂಪಿಂಗ್ ವಿಭಾಗ

ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ಅಧಿನಿಯಮ 2023, ಇದಕ್ಕೆ ದಿನಾಂಕ 03.02.2024ರಂದು ರಾಜ್ಯಪಾಲರ ಅಂಕಿತ ದೊರೆತಿರುತ್ತದೆ, ಹಾಗೂ ಅಂದಿನ ದಿನದಿಂದಲೇ ಅಧಿನಿಯಮದಲ್ಲಾದ ತಿದ್ದುಪಡಿಗಳು/ಪರಿಷ್ಕರಣೆಯಾದ ಮುದ್ರಾಂಕ ಶುಲ್ಕ ಜಾರಿಗೆ ಬಂದಿರುತ್ತದೆ. ಸದರಿ ತಿದ್ದುಪಡಿಗೆ ಸಂಬಂಧಿಸಿದಂತೆ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ತನ್ನ ವೆಬ್‌ಸೈಟ್‌ನಲ್ಲಿ ದಿನಾಂಕ 14.2.2024ರಿಂದ ಮುದ್ರಾಂಕ ಶುಲ್ಕದ ಲೆಕ್ಕಾಚಾರಕ್ಕೆ ಆಟೋಕ್ಯಾಲುಕ್ಯೂಲೇಟರ್ ಪದ್ಧತಿ ಅಳವಡಿಸಿದೆ. ಇದರಿಂದ ಯಾವುದೇ ಗ್ರಾಹಕ/ಸಂಸ್ಥೆಯ ಸದಸ್ಯನು ಒಡಂಬಡಿಕೆ/ಕರಾರಿನ ಸೂಕ್ತ ಅನುಚ್ಛೇದವನ್ನು ಹಾಗೂ ಪರಿಗಣನೆ ಮೊತ್ತ (Consideration Price)ವನ್ನು ಅರ್ಜಿಯಲ್ಲಿ ತುಂಬಿ ಸಹಿ ಮಾಡಿ ಎಸಿಸಿಗಳಿಗೆ ನೀಡುವ ಮೂಲಕ ಮಾಹಿತಿ ನೀಡಬೇಕಾಗುತ್ತದೆ. ಎಸಿಸಿಯಲ್ಲಿನ ಸಿಬ್ಬಂದಿ ಅರ್ಜಿಯಲ್ಲಿ ಗ್ರಾಹಕರು ತಿಳಿಸಿರುವ ಅನುಚ್ಛೇದವನ್ನು ಆಯ್ಕೆ ಮಾಡಿ, ಪರಿಗಣನೆ ಮೊತ್ತ(Consideration Price)ವನ್ನು ನಮೂದಿಸಿ, ನಂತರ ಪಕ್ಕದಲ್ಲಿರುವ ಕ್ಲಿಕ್ ಹಿಯರ್ ಟು ಕ್ಯಾಲುಕ್ಯೂಲೇಟ್ ಸ್ಟಾಂಪ್ ಡ್ಯೂಟಿ (Click here to calculate stamp duty) ಟ್ಯಾಬ್‌ಅನ್ನು ಎರಡು ಬಾರಿ ಒತ್ತಬೇಕು. ಇದರಿಂದ ಮೊದಲ ಬಾರಿ ಒತ್ತಿದಾಗ ಪರಿಗಣನೆ ಮೊತ್ತವನ್ನು ಅಕ್ಷರಗಳಲ್ಲಿ, ಎರಡನೇ ಬಾರಿ ಒತ್ತಿದಾಗ ಮುದ್ರಾಂಕ ಶುಲ್ಕವನ್ನು ತೋರಿಸುತ್ತದೆ. ಆಟೋಕ್ಯಾಲುಕ್ಯೂಲೇಟರ್ ವ್ಯವಸ್ಥೆಯಲ್ಲಿ ಗ್ರಾಹಕರು ಕೇಳುವಂತೆ ಮುದ್ರಾಂಕ ಶುಲ್ಕದ ಮೊತ್ತವನ್ನು ನಮೂದಿಸಿ ಇ–ಸ್ಟಾಂಪ್ ವಿತರಿಸಲು ಸಾಧ್ಯವಾಗುವುದಿಲ್ಲ. ಮುಂದುವರೆದು ಈ ವ್ಯವಸ್ಥೆಯಲ್ಲಿ ಕೆಲವು ಅನುಚ್ಛೇದಗಳಿಗೆ ಮುದ್ರಾಂಕ ಶುಲ್ಕವು ಪರಿಗಣನೆ ಮೊತ್ತ(Consideration Price)ವನ್ನು ನಮೂದಿಸಿದ ನಂತರವೂ ನಿರ್ಧಿಷ್ಟವಾಗಿರುತ್ತದೆ. ಇದಕ್ಕೆ ಪರಿಗಣನೆ ಮೊತ್ತ (Consideration Price) ವ್ಯತ್ಯಾಸ ಮಾಡುವುದಿಲ್ಲ. ಉಳಿದ ಅನುಚ್ಛೇದಗಳಿಗೆ ಪರಿಗಣನೆ ಮೊತ್ತ(Consideration Price)ನ ಆಧಾರದ ಮೇಲೆ ಮುದ್ರಾಂಕ ಶುಲ್ಕ ಬದಲಾಗುತ್ತದೆ. ತಿದ್ದುಪಡಿಗೆ ಸಂಬಂಧಿಸಿದ ರಾಜ್ಯಪತ್ರದ ಪ್ರತಿ, ಕಂದಾಯ ಇಲಾಖೆಯ ಉಪನೋಂದಣಾಧಿಕಾರಿಗಳಿಂದ ಪಡೆದ ಅನುಚ್ಛೇದಗಳ ಪಟ್ಟಿಯನ್ನು, ಹಾಗೂ ಅನುಚ್ಛೇದವಾರು ನಿರ್ಧಿಷ್ಟ (Fixed) ಹಾಗೂ ಬದಲಾಗಬಹುದಾದ(Variable) ಮುದ್ರಾಂಕ ಶುಲ್ಕಗಳ ಪಟ್ಟಿಯನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ.,ರವರಿಂದ ಪಡೆದು ತಮಗೆ ತಮ್ಮ ಎಸಿಸಿಗಳ ಇ–ಸ್ಟಾಂಪ್ ಲೆಕ್ಕ ವರದಿ (Account Report) ಕಳುಹಿಸುವ ಇ–ಮೇಲ್ ಐಡಿಗೆ ದಿನಾಂಕ 08.02.2024, 14.02.2024 ಹಾಗೂ 22.02.2024ರಂದು ಕಳುಹಿಸಲಾಗಿದೆ.

**ವಿಶೇಷ ಸೂಚನೆ :** ಗ್ರಾಹರಿಂದ ಅನುಚ್ಛೇದ, ಪರಿಗಣನೆ ಮೊತ್ತ ವಿವರಗಳನ್ನು ಭರ್ತಿ ಮಾಡಿ ಸಹಿ ಮಾಡಿದ ಅರ್ಜಿಯನ್ನು ಪಡೆದ ನಂತರವೇ ಇ–ಸ್ಟಾಂಪ್ ವಿತರಿಸಲು ಕೋರಿದೆ. ಗ್ರಾಹಕರಿಂದ ಪಡೆದ ಅರ್ಜಿಗಳನ್ನು 3ವರ್ಷ ಸಹಕಾರಿಗಳು ಸಂರಕ್ಷಿಸಬೇಕು. ಮುದ್ರಾಂಕ ಇಲಾಖಾ ಅಧಿಕಾರಿಗಳು. ಸಂಯುಕ್ತ ಸಹಕಾರಿಯ ಅಧಿಕಾರಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ನ ಅಧಿಕಾರಿಗಳು ಅಥವಾ ಪೋಲಿಸ್/ಸಿಸಿಬಿ/ಸಿಬಿಐ/ನ್ಯಾಯಾಲಯಗಳಂತಹ ವಿಚಾರಣಾ ಸಂಸ್ಥೆಗಳು ಕೇಳಿದರೆ ಒದಗಿಸಬೇಕಾಗುತ್ತದೆ. ಸಮಸ್ಯಾತ್ಮಕ ಇ–ಸ್ಟಾಂಪ್‌ಗೆ ಸಂಬಂಧಿಸಿದ ಅರ್ಜಿಯ ಬಗ್ಗೆ ತಮಗೆ 3 ವರ್ಷದಲ್ಲಿ ಮಾಹಿತಿ ಬಂದ್ದಲ್ಲಿ ಅನಿರ್ಧಿಷ್ಟಾವಧಿಗೆ ಸಂರಕ್ಷಿಸಬೇಕು. ಅರ್ಜಿ ಪಡೆಯದೇ ಇ–ಸ್ಟಾಂಪ್ ವಿತರಿಸಿ, ಅದರಿಂದ ಮುಂದಿನ ದಿನಗಳಲ್ಲಿ ಸಮಸ್ಯೆಗಳು ಉಂಟಾದಲ್ಲಿ ಅಂತಹ ಸಮಸ್ಯೆಗಳಿಗೆ ಸಿಬ್ಬಂದಿಗಳೇ ನೇರ ಹೊಣೆಗಾರರಾಗಿರುತ್ತಾರೆ.

**ರಾಜೇಂದ್ರ ಶಿಂಧೆ ಹೆಚ್, ಅಧಿಕಾರಿ, ಇ–ಸ್ಟಾಂಪಿಂಗ್ ವಿಭಾಗ.**

# 2023-24ನೇ ಸಾಲಿನ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಪ್ರವೇಶ ಅಧಿಸೂಚನೆ (DCBM COURSE 2ND BATCH NOTIFICATION)

**Karnataka State Rural Development and Panchayat Raj University, Gadag**
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವ ವಿದ್ಯಾಲಯ ಗದಗ
&
**Karnataka State Souharda Federal Co-operative Ltd. Bengaluru**
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು

**No. RDPRU 04 ACA 2024** **Date:** 23/02/2024

## 2023-24 ನೇ ಸಾಲಿಗೆ ಪ್ರವೇಶ ಅಧಿಸೂಚನೆ

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:** 23/02/2024

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಇವರುಗಳ ಸಹಯೋದಲ್ಲಿ 2023–24 ನೇ ಸಾಲಿಗೆ ಒಂದು ವರ್ಷದ "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕಾರ್ಯಕ್ರಮಕ್ಕೆ ಅರ್ಹ ಅಭ್ಯರ್ಥಿಗಳಿಂದ ಹಾಗೂ ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಂದ ಸಮುಚಿತ ಮಾರ್ಗದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದೆ.

### ಡಿಪ್ಲೊಮಾ ಕಾರ್ಯಕ್ರಮದ ವಿವರ:

| | |
|---|---|
| ಕಾರ್ಯಕ್ರಮದ ಶೀರ್ಷಿಕೆ | ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ |
| ಕಾರ್ಯಕ್ರಮದ ಅವಧಿ | ಒಂದು ವರ್ಷ (1) |
| ಸೆಮಿಸ್ಟರಗಳ ಸಂಖ್ಯೆ | ಎರಡು (2) |
| ಬೋಧನಾ ವಿಧಾನ | ವಾರಾಂತ್ಯದ ಆನ್‌ಲೈನ್ ತರಗತಿಗಳು ಹಾಗೂ ಸಂಪರ್ಕ ತರಗತಿಗಳು |
| **ಅರ್ಹತೆ** | |
| ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು | ಪಿ.ಯು.ಸಿ ಅಥವಾ ಎಸ್.ಎಸ್.ಎಲ್.ಸಿ ಉತ್ತೀರ್ಣತೆಯ ಜೊತೆಗೆ ಕನಿಷ್ಠ 3 (ಮೂರು) ವರ್ಷಗಳ ಸೇವಾನುಭವ ಹೊಂದಿರಬೇಕು |
| ಸಾಮಾನ್ಯ ಯುವಕರಿಗೆ | 12 ನೇ ತರಗತಿ / ಪಿ.ಯು.ಸಿ ಉತ್ತೀರ್ಣ |
| ಅರ್ಜಿ ಹಾಗೂ ಕಾರ್ಯಕ್ರಮದ ಶುಲ್ಕ | ರೂ. 9,500=00 |

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

- ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವೆಬ್ ಸೈಟ್ www.ksrdpru.ac.in ಮತ್ತು www.souharda.coop ನಲ್ಲಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು.
- ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಹಾಗೂ ಕಾರ್ಯಕ್ರಮದ ಶುಲ್ಕ ರೂ. 9,500/- (ಅರ್ಜಿ ಶುಲ್ಕ ರೂ.100/- ಹಾಗೂ ಕಾರ್ಯಕ್ರಮದ ಶುಲ್ಕ 9,400/-)ಗಳನ್ನು "ಹಣಕಾಸು ಅಧಿಕಾರಿಗಳು, ಕೆ.ಎಸ್.ಆರ್.ಡಿ.ಪಿ.ಆರ್.ಯು. ಗದಗ," ಇವರ ಹೆಸರಿಗೆ ಡಿ.ಡಿ. ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ ಅರ್ಜಿ ಶುಲ್ಕವನ್ನು ಆನ್–ಲೈನ್‌ಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ **SB Account Number: 110095611771, Canara Bank, IFSC Code: CNRB0000511 through NEFT / RTGS / UPI** ಮುಖಾಂತರ ಪಾವತಿಸಿ, Transaction ID Screenshot Print-Out ಪಡೆದು **"ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055."** ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯ ಮಾಡಿದ ಮೂಲ ಶುಲ್ಕದ ರಸೀದಿ / Transaction ID Screenshot Print-Outನ 2 ಪ್ರತಿಗಳನ್ನು ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ 20.03.2024ರ ಒಳಗಾಗಿ ಸಲ್ಲಿಸುವುದು.
- ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು "ಸೇವಾ ಪ್ರಮಾಣ ಪತ್ರ" ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳಿದ್ದಲ್ಲಿ) ಯಾವುದೇ ಮುನ್ಸೂಚನೆ ನೀಡದೇ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1

**ಮಹತ್ವದ ದಿನಗಳು:**

| | | |
|---|---|---|
| 1) | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 15.03.2024 |
| 2) | ತಾತ್ಕಾಲಿಕ ಜೇಷ್ಠತಾಪಟ್ಟಿ ಪ್ರಕಟಿಸುವ ದಿನಾಂಕ | 20.03.2024 |
| 3) | ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ | 06.04.2024 |

- **ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಪ್ರವೇಶಾತಿ ಸಯೋಜಕರನ್ನು ಸಂಪರ್ಕಿಸಬಹುದಾಗಿದ**

  - **ಡಾ. ಅಭಯಕುಮಾರ್ ಗಸ್ತಿ**
    ಕಾರ್ಯಕ್ರಮ ಸಂಯೋಜಕರು, ಎಂ.ಕಾಂ. ಮತ್ತು ಡಿ.ಸಿ.ಬಿ.ಎಂ
    ಕ.ರಾ.ಗ್ರಾ. ಮತ್ತು ಪಂ.ರಾ ವಿಶ್ವವಿದ್ಯಾಲಯ, ಗದಗ,
    ಮೊಬೈಲ್ ಸಂಖ್ಯೆ: 9844456930
  - **ಶ್ರೀ. ವಿ.ಜಿ. ಕಾರ್‌ಕೂನ್**
    ತರಬೇತಿ ಸಂಯೋಜಕರು,
    ಕ.ರಾ.ಸೌ.ಸಂ.ಸ.ಲಿ. ಬೆಂಗಳೂರು,
    ಮೊಬೈಲ್ ಸಂಖ್ಯೆ: 8884466710

**ಪ್ರವೇಶಾತಿ ಮಾಹಿತಿ ಕೇಂದ್ರ** – 9741699808/9632062466

ಆದೇಶದ ಮೇರೆಗೆ

**ಕುಲಸಚಿವರು**
**ಪ್ರೊ. ಡಾ. ಸುರೇಶ್ ವಿ ನಾಡಗೌಡರ**

**ಪ್ರತಿಗಳು:** ಆಪ್ತ ಸಹಾಯಕರು ಕುಲಪತಿಗಳು / ಕುಲಸಚಿವರು / ವಿತ್ತಾಧಿಕಾರಿಗಳು / ವ್ಯವಸ್ಥಾಪಕ ನಿರ್ದೇ
ಕ.ರಾ.ಸೌ.ಸಂ.ಸ.ಲಿ. / ಪರೀಕ್ಷಾ ವಿಭಾಗ / ಸೂಚನಾ ಫಲಕ / ಕಛೇರಿ ಕಡತ.

ಸಹಕಾರ ಹಾಗೂ ಬ್ಯಾಂಕಿಂಗ್ ಮನೇಜ್‌ಮೆಂಟ್ (DCBM) ಕೋರ್ಸ್ ಸೌಹಾರ್ದ ಸಹಕಾರಿಗಳ ಸಿಬ್ಬಂದಿ ವರ್ಗದವರಿಗಾಗಿಯೇ ಮಾಡಿರುವುದರಿಂದ ಹೆಚ್ಚಿನ ಸಹಕಾರ ಸಂಸ್ಥೆಗಳ ಸಿಬ್ಬಂದಿವರ್ಗದವರು ಹಾಗೂ ಯುವಕರು ಈ ಕೋರ್ಸ್‌ನ ಪ್ರಯೋಜನ ಪಡೆಯಲು ಕೋರಿದೆ.

| ಜಿ. ನಂಜನಗೌಡ | ಎ.ಆರ್. ಪ್ರಸನ್ನಕುಮಾರ್ | ಶರಣಗೌಡ ಜಿ. ಪಾಟೀಲ |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು |

ಅರ್ಜಿ ಫಾರ್ಮ್‌ನ್ನು ಯೂನಿವರ್ಸಿಟಿ ಹಾಗೂ ಸಂಯುಕ್ತ ಸಹಕಾರಿಯ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

# ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಪ್ರವೇಶದ ಅರ್ಜಿ ನಮೂನೆ

Application No.: ______

**Karnataka State Rural Development and Panchayat Raj University, Gadag**
**and**
**Karnataka State Souharda Federal Co-operative Ltd., Bengaluru**

## APPLICATION FORM - Diploma in Co-operation and Baking Management 2023-24

AFFIX RECENT PASSPOSTSIZE PHOTOGRAPH

**ಸೂಚನೆಗಳು:**

೧. ನಿಮ್ಮೆಲ್ಲಾ ಬೇಡಿಕೆಗಳಿಗೆ ಪ್ರಸಕ್ತ ಧೃಡೀಕೃತ ಪ್ರಮಾಣ ಪತ್ರಗಳ ನೆರಳಚ್ಚು ಪ್ರತಿಗಳನ್ನು ಲಗತ್ತಿಸುವುದು.

೨. ಎಲ್ಲಾ ಅಂಕಣಗಳನ್ನು ತುಂಬಬೇಕು. ಸಂಬಂಧಪಡದ ಅಂಕಣಗಳಿಗೆ NA (Not Applicable) ಎಂದು ಭರ್ತಿ ಮಾಡುವುದು, ಅಪೂರ್ಣವಾದ ಅರ್ಜಿಯನ್ನು ತಿರಸ್ಕರಿಸಲಾಗುವುದು.

೩. ಈ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ ಲಿಂಕ್ (www.ksrdpru.ac.in) ಹಾಗೂ (www.souharda.coop) ಮೂಲಕ ಡೌನ್‌ಲೋಡ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು **ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ, ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೊಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055**,ಇವರಿಗೆ ಶುಲ್ಕ ಪಾವತಿಸಿದ ರಸೀದಿ ಮತ್ತು ಅವಶ್ಯಕವಾದ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸುವುದು / (ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಪ್ರವೇಶಾತಿಅಧಿಸೂಚನೆ ನೋಡಬಹುದು).

**Instructions:**

1. PHOTO – COPIES of relevant certificates should be submitted for all your claims.
2. All fields should be filled. Fields not applicable should be written as NA. Incomplete Application is liable to be rejected.
3. This application form may be downloaded from the University and KSSFCL website (www.ksrdpru.ac.in) or (www.souharda.coop) and duly filled application form shall be sent to the **"Managing Director, Karnataka State Souharda Federal Co-operative Ltd., Sahakari Souda, No. 68, First Floor, between 17th & 18th, Margosa Road, Malleshwaram, Bengaluru-560055 Karnataka"** with necessary fees and enclosures (for more details see Admission Notification).

| | |
|---|---|
| **1.** ಅರ್ಜಿ ಹಾಗೂ ಪ್ರೋಗ್ರಾಮ್ ಶುಲ್ಕ ಪಾವತಿಸಿದ ವಿವರ/ Application and Admission Fees Paid Details: | |
| ಶುಲ್ಕ/ Fee (in Rupees): | ದಿನಾಂಕ/ Date: |
| ಬ್ಯಾಂಕ್ ಹೆಸರು ಮತ್ತು ಶಾಖೆ/ Name of the Bank & Branch: | |
| ಚಲನ್/ ಡಿ.ಡಿ. / ಆನಲೈನ್ ಪಾವತಿ ಸಂಖ್ಯೆ Challan/D.D./Online Payment Transaction ID No: | |
| **2.** ಅಭ್ಯರ್ಥಿಯ ಹೆಸರು (ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿರುವಂತೆ ದೊಡ್ಡ ಅಕ್ಷರಗಳಲ್ಲಿ) Candidate's Name (As per the SSLC Marks Card in Capital Letters): | |
| | |
| ತಂದೆಯ ಹೆಸರು / ಕೆಲಸ / Father's Name / Occupation | |
| ತಾಯಿಯ ಹೆಸರು / ಕೆಲಸ / Mother's Name / Occupation | |
| ಪೋಷಕರ ಹೆಸರು / ಕೆಲಸ / Guardian's Name / Occupation | |
| **3.** ಸಂಪರ್ಕಿಸುವ ವಿಳಾಸ / Address for Correspondence: | |
| ಪೂರ್ಣ ಹೆಸರು / Full Name: | |
| ಅಂಚೆ ವಿಳಾಸ / Postal Address: <br> ಬೀದಿ / ಮೋಹಲ್ಲಾ Area / Street: | |

Page **1** of 3

| | | |
|---|---|---|
| ಅಂಚೆ / Post: | ತಾಲೂಕ / Tq: | ಜಿಲ್ಲಾ / Dist: |
| ರಾಜ್ಯ / State: | ದೇಶ / Country: | ಪಿನ್‌ಕೋಡ್ / Pin Code: |
| E-mail ID: | ಮೊಬೈಲ್ ನಂ. / Mobile No: | |
| 4. ಜಾತಿ / Caste: | ವರ್ಗ / Category: ☐ | |
| 5. ರಾಷ್ಟ್ರೀಯತೆ / Nationality | ಭಾರತೀಯ / Indian ☐ | ವಿದೇಶಿ / Foreigner ☐ |
| 6. ಲಿಂಗ/Gender: ಪುರುಷ / Male ☐ | ಸ್ತ್ರೀ / Female ☐ | ಲಿಂಗತ್ವ / Transgender ☐ |
| 7. ಹುಟ್ಟಿದ ದಿನಾಂಕ / Date of Birth | ☐☐☐☐☐☐☐☐ | |
| 8. ಆಧಾರ್‌ಕಾರ್ಡ್ ಸಂಖ್ಯೆ / Aadhaar Card No. | | |

## EDUCATIONAL QUALIFICATION DETAILS

| | |
|---|---|
| **9.** ವ್ಯಾಸಂಗ ಮಾಡಿದ ಅರ್ಹತಾ ಪರೀಕ್ಷಾವಿವರಗಳು / Details of Qualifying Examination: | |
| ***a.*** ಶಿಕ್ಷಣದ ವಿವರ | S.S.L.C ☐ PUC ☐ |
| ***b.*** ಹೈಸ್ಕೂಲ್/ ಕಾಲೇಜು ಹೆಸರು Name of the High School / College | |
| ***c.*** ತೇರ್ಗಡೆಯಾದ ವರ್ಷ/ Year of passing | |
| ನೋಂದಣಿ ಸಂಖ್ಯೆ / Registration No. | |
| ***d.*** ಒಟ್ಟುಗರಿಷ್ಠ ಅಂಕಗಳು (ಭಾಷಾ ವಿಷಯಗಳ ಸಹಿತ) / Max. Marks (Including Languages) | |
| ***e.*** ಪಡೆದಿರುವ ಅಂಕಗಳು (ಭಾಷಾ ವಿಷಯಗಳ ಸಹಿತ) / Marks obtained (Including Languages) | |
| ***f.*** ಒಟ್ಟು ಶೇಕಡಾ / Total Percentage % | |
| **10.** ಅಭ್ಯರ್ಥಿಯಿಂದದೃಢೀಕರಿಸಲ್ಪಟ್ಟಒಟ್ಟು ಲಗತ್ತಿಸಲಾದ ಪ್ರತಿಗಳು / Total Number of enclosures attested by the Candidate: (SSLC / PUC / Experience Certificate / Caste / Income / Aadhaar Card / Any other Certificates) | ☐ |

## DETAILS OF IN-SERVICE CANDIDATES (ಸೇವಾನಿರತ ಅಭ್ಯರ್ಥಿಗಳ ಮಾಹಿತಿ)

| | |
|---|---|
| ಸಹಕಾರಿ ಸಂಸ್ಥೆಯ ಹೆಸರು<br>Name of the Co-operative Organization: | |
| ಪದನಾಮ Designation: | |
| ಕಾರ್ಯಾನುಭವದ ಅವಧಿ Years of Work Experience: | |
| ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಯ ವಿಳಾಸ<br>Correspondence Address of Working Co-operative Organization: | |

### ***ಅಭ್ಯರ್ಥಿಯ ಘೋಷಣೆ/ Declaration by the Candidate***

*ನಾನು ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆಂದು ಘೋಷಿಸುತ್ತೇನೆ ಮತ್ತು ಯಾವುದೇ ಮಾಹಿತಿಯನ್ನು ಅಡಗಿಸಿರುವುದಿಲ್ಲ. ನಾನು ತಪ್ಪು ಮಾಹಿತಿ ನೀಡಿದ್ದಲ್ಲಿ, ಕ.ರಾ.ಗ್ರಾ.ಅ.ಪಂ.ರಾ. ವಿಶ್ವವಿದ್ಯಾಲಯ ಹಾಗೂ ಕ.ರಾ.ಸೌ.ಸಂ.ಸ.ಲಿ. ನನ್ನ ವಿರುದ್ಧ ಕ್ರಮ ಕೈಗೊಳ್ಳ ಬಹುದಾಗಿರುತ್ತದೆ ಹಾಗೂ ನನ್ನ ಪ್ರವೇಶವನ್ನು ಸಹ ರದ್ದು ಪಡಿಸಬಹುದಾಗಿದೆ. ಯುಜಿಸಿ ಪ್ರವೇಶ ನಿಯಮಗಳ ಪ್ರಕಾರ, ಪ್ರತಿ ವಿಷಯದ ಪರೀಕ್ಷೆಗೆ ಹಾಜರಾಗಲು ಕನಿಷ್ಠ 75% ಹಾಜರಾತಿಕಡ್ಡಾಯ ಮತ್ತು ಹಾಜರಾತಿಯ ಕೊರತೆಗೆ ರಿಯಾಯಿತಿ ನೀಡಲು ನಿಯಮಗಳಲ್ಲಿ ಅವಕಾಶವಿಲ್ಲ ಎಂಬುವುದಕ್ಕೆ ನಾನು ಬದ್ಧನಿರುತ್ತೇನೆ/ಳೆ ಹಾಗೂ ನಾನು ವಿಶ್ವವಿದ್ಯಾಲಯದ ಹಾಗೂ ಕ.ರಾ.ಸೌ.ಸಂ.ಸ.ಲಿ.ನ ನಿಯಮಗಳಿಗೆ ಬದ್ಧನಾಗಿರುತ್ತೇನೆ/ಳೆ.*

ದಿನಾಂಕ / Date:

ಸ್ಥಳ / Place:

ಅಭ್ಯರ್ಥಿಯ ಸಹಿ / ***Signature of the Applicant***

Page **2** of 3

***For Office Use Only***

1. Candidate's Name ……………………………………………………………………………………………
2. Application No.……………………………………………………………………………………………
3. Diploma Programme ………………………………………………………………………………………
4. Category ………………………………… Date of Submission……………………………………………
5. Application Fee paid Challan / DD No. …………………………………… Date. …………………Rs.………..
6. Bank Name……………………………………………………………………………………

……………………………………………………*CUT HERE*………………………………………………

***CANDIDATE COPY***

**Karnataka State Rural Development and Panchayat Raj University, Gadag**
**and**
**Karnataka State Souharda Federal Co-operative Ltd., Bengaluru**

1. Candidate's Name ……………………………………………………………………………………………
2. Application No.……………………………………………………………………………………………
3. Category ………………………………… Date of Submission ……………………………………………
4. Application Fee paid Challan / DD No. …………………………………… Date. ……………Rs.…………
5. Bank Name……………………………………………………………………………………………

*Collecting Official's Signature & Name* ______________________________

Page **3** of 3

# 2023-24 ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವ ಕುರಿತು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2023-24ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ದಿನಾಂಕ:31-03-2024 ರವರೆಗೆ ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಸಿಒ 205 ಸಿಎಲ್‌ಎಸ್ 2023, ದಿನಾಂಕ: 06-11-2023 ಹಾಗೂ ತಿದ್ದುಪಡಿ ಆದೇಶ ದಿ: 29-11-2023.
2. ಯಶಸ್ವಿನಿ ಟ್ರಸ್ಟ್ ಇವರ ಕಡತ ಸಂಖ್ಯೆ: ಯಶಸ್ವಿನಿ/104/ಸಿಡಬ್ಲ್ಯೂ-2/ವಿಸ್ತರಣೆ ಆದೇಶ/2024.

***

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರದ ಆದೇಶದಲ್ಲಿ, 2023-24ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ದಿನಾಂಕ:01-01-2024 ರಿಂದ ದಿನಾಂಕ:28-02-2024 ರವರೆಗೆ ಮುಂದುವರೆಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (2) ರಲ್ಲಿ ಯಶಸ್ವಿನಿ ಯೋಜನೆಯು ಒಂದು ಜನಪ್ರಿಯ ಯೋಜನೆಯಾಗಿದ್ದು, ಈ ಯೋಜನೆಯು ಹೆಚ್ಚಿನ ಸಂಖ್ಯೆಯ ಸಹಕಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಯೋಜನೆಯಡಿ ಇನ್ನೂ ಹೆಚ್ಚಿನ ಸದಸ್ಯರನ್ನು ನೋಂದಾಯಿಸಿಕೊಳ್ಳಲು ಅನುವಾಗುವಂತೆ ನೋಂದಣಿ ಅವಧಿಯನ್ನು ದಿ:31-03-2024 ರವರೆಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಆದುದರಿಂದ ಯಶಸ್ವಿನಿ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಸಹಕಾರಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಸದಸ್ಯತ್ವ ನೋಂದಣಿ ಅವಧಿಯನ್ನು ದಿನಾಂಕ:29-02-2024 ರಿಂದ ದಿನಾಂಕ:31-03-2024 ರವರೆಗೆ ವಿಸ್ತರಿಸಲು ತೀರ್ಮಾನಿಸಿ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 205 ಸಿಎಲ್‌ಎಸ್ 2023, ದಿನಾಂಕ: 29-02-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2023-24ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು **ದಿನಾಂಕ:29-02-2024 ರಿಂದ ದಿನಾಂಕ:31-03-2024** ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

29/2/2024

**(ರಂಗನಾಥ.ಜಿ)**
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಹಕಾರ ಇಲಾಖೆ.

29-2-2024

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

## ಕರ್ನಾಟಕ ಕಡ್ಡಾಯ ಗ್ರಾಚ್ಯುಟಿ ವಿಮಾ ನಿಯಮ–2024

**(ಸಹಕಾರಿ ಸಂಸ್ಥೆಗಳಲ್ಲಿ ನೌಕರರ ಸೇವಾ ಭದ್ರತೆ ಹಾಗೂ ಸಹಕಾರಿ ಸಂಸ್ಥೆಗಳಿಗೆ ಗ್ರಾಚ್ಯುಟಿ ಪಾವತಿಸಲು ಹೊರೆಯಾಗದಂತೆ ಈ ಯೋಜನೆಯನ್ನು ಕಡ್ಡಾಯವಾಗಿರುವುದರಿಂದ ಇದನ್ನು ನೌಕರರು ಹಾಗೂ ಸಹಕಾರಿ ಸಂಸ್ಥೆಗಳ ಹಿತದೃಷ್ಟಿಯಿಂದ ಪ್ರಕಟಿಸಿದೆ)**

ಕೇಂದ್ರ ಗ್ರಾಚ್ಯುಟಿ ಪಾವತಿ ಕಾಯ್ದೆ–1972 ರನ್ವಯ ಕಾರ್ಖಾನೆಗಳು, ಗಣಿಗಳು, ತೈಲ ಕ್ಷೇತ್ರಗಳು, ತೋಟಗಳು, ಬಂದರುಗಳು, ರೈಲ್ವೆ, ಮೋಟಾರು ಸಾರಿಗೆ ಸಂಸ್ಥೆಗಳು, ಕಂಪನಿಗಳು ಮತ್ತು ಹಿಂದಿನ ಹನ್ನೆರಡು ತಿಂಗಳಲ್ಲಿ ಯಾವುದೇ ದಿನದಲ್ಲಿ ಹತ್ತು ಅಥವಾ ಅದಕ್ಕಿಂತ ಹೆಚ್ಚು ಜನರು ಅಥವಾ ಉದ್ಯೋಗದಲ್ಲಿದ್ದ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಿಂದ ಹಿಡಿದು ಎಲ್ಲಾ ವ್ಯಾಪಾರ ಸಂಸ್ಥೆಗಳಿಗೆ ಅನ್ವಯಿಸುತ್ತದೆ. ಹಾಗೆ ಈ ಕಾಯ್ದೆಯ ಸೆಕ್ಷನ್ 4–ಎ ರನ್ವಯ ಎಲ್ಲಾ ಉದ್ಯೋಗದಾತರು ತಮ್ಮ ಉದ್ಯೋಗಿಗಳಿಗೆ ಗ್ರಾಚ್ಯುಟಿ ಪಾವತಿಸುವ ಹೊಣೆಗಾರಿಕೆಗೆ ವಿಮೆ ಪಡೆಯಲು ಅವಕಾಶ ನೀಡಲಾಗಿದೆ. ಕರ್ನಾಟಕ ಸರ್ಕಾರವು ವಿವಿಧ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಕಲ್ಯಾಣವನ್ನು ಹೆಚ್ಚಿಸುವ ಮತ್ತು ಆರ್ಥಿಕ ಭದ್ರತೆಯನ್ನು ಖಾತ್ರಿಪಡಿಸುವ ಮಹತ್ವದ ಹೆಜ್ಜೆಯಲ್ಲಿ, ಕರ್ನಾಟಕ ಸರ್ಕಾರವು ಕಡ್ಡಾಯ ಗ್ರಾಚ್ಯುಟಿ ವಿಮಾ ನಿಯಮ–2024 ಅನ್ನು ಪರಿಚಯಿಸಿದೆ ಇದು ಜನವರಿ 10, 2024 ರಂದು, ಕರ್ನಾಟಕ ಸರ್ಕಾರವು ಕರ್ನಾಟಕ ಕಡ್ಡಾಯ ಗ್ರಾಚ್ಯುಟಿ ವಿಮಾ ನಿಯಮಗಳು, 2024–ಅನ್ನು ಕೇಂದ್ರ ಕಾಯ್ದೆಯ ಗ್ರಾಚ್ಯುಟಿ ಸೆಕ್ಷನ್ 4–ಎ ಅನ್ವಯ ಅಧಿಸೂಚನೆ ಹೊರಡಿಸಿತು. ಈ ನಿಯಮಗಳು ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಸ್ಥೆಗಳು ಈ ಕೆಳಗಿನಂತೆ ವಿವರಿಸಿದ ರೀತಿಯಲ್ಲಿ ನಿಗದಿತ ಅವಧಿಯೊಳಗೆ ತಮ್ಮ ಗ್ರಾಚ್ಯುಟಿ ಹೊಣೆಗಾರಿಕೆಗಾಗಿ ವಿಮಾಸಂಸ್ಥೆಗಳಿಂದ ವಿಮಾಪಾಲಿಸಿಯನ್ನು ಪಡೆಯುವುದನ್ನು ಕಡ್ಡಾಯಗೊಳಿಸಿದೆ.

ಸರ್ಕಾರದ ಈ ಮಹತ್ವದ ಕ್ರಮವು ನಿಯಮಗಳ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ವ್ಯವಹಾರಗಳ ಹೆಚ್ಚುವರಿ ಅನುಸರಣೆ ಅವಶ್ಯಕತೆಗಳನ್ನು ಅನುಷ್ಠಾನ ಮಾಡುವ ಗುರಿಯನ್ನು ಹೊಂದಿದೆ. ಈ ಶಾಸನವು ರಾಜ್ಯದ ಕಾರ್ಮಿಕರಿಗೆ ಒಂದು ಪ್ರಮುಖ ಕಡ್ಡಾಯ ಸೌಲಭ್ಯವಾಗಿ ಪರಿಗಣಿತವಾಗಿದೆ ಮತ್ತು ಜವಾಬ್ದಾರಿಯುತ ಉದ್ಯೋಗ ಅಭ್ಯಾಸಗಳ ಸಂಸ್ಕೃತಿಯನ್ನು ಉತ್ತೇಜಿಸುವಾಗ ವಿವಿಧ ಕ್ಷೇತ್ರಗಳಲ್ಲಿನ ಉದ್ಯೋಗಿಗಳ ಗ್ರಾಚ್ಯುಟಿ ಪ್ರಯೋಜನಗಳನ್ನು ರಕ್ಷಿಸುವ ಗುರಿಯನ್ನು ಹೊಂದಿದೆ. ಈ ಪ್ರಗತಿಪರ ಕಾಯ್ದೆಯ ಪ್ರಮುಖ ನಿಬಂಧನೆಗಳು ಮತ್ತು ಪರಿಣಾಮಗಳನ್ನು ಪರಿಶೀಲಿಸೋಣ.

### ಕರ್ನಾಟಕ ಕಡ್ಡಾಯ ಗ್ರಾಚ್ಯುಟಿ ವಿಮಾ ನಿಯಮ–2024 ಅನ್ವಯಿಸುವಿಕೆ

ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳು, ಗಣಿಗಳು, ತೈಲ ಕ್ಷೇತ್ರಗಳು, ತೋಟಗಳು, ಬಂದರುಗಳು, ರೈಲ್ವೆ, ಮೋಟಾರು ಸಾರಿಗೆ ಸಂಸ್ಥೆಗಳು, ಕಂಪನಿಗಳು ಮತ್ತು ಹಿಂದಿನ ಹನ್ನೆರಡು ತಿಂಗಳಲ್ಲಿ ಯಾವುದೇ ದಿನದಲ್ಲಿ ಹತ್ತು ಅಥವಾ ಅದಕ್ಕಿಂತ ಹೆಚ್ಚು ಜನರು ಅಥವಾ / ಉದ್ಯೋಗದಲ್ಲಿದ್ದ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಿಂದ ಹಿಡಿದು ಎಲ್ಲಾ ವ್ಯಾಪಾರ ಸಂಸ್ಥೆಗಳಿಗೆ ಕರ್ನಾಟಕ ಕಡ್ಡಾಯ ಗ್ರಾಚ್ಯುಟಿ ವಿಮಾ ಕಾಯ್ದೆ–2024 ಅನ್ವಯಿಸುತ್ತದೆ.

### ನಿಯಮಗಳ ಅಡಿಯಲ್ಲಿ ಉದ್ಯೋಗದಾತರ ನೋಂದಣಿ ಮತ್ತು ನಿರ್ವಹಿಸಬೇಕಾದ ಕ್ರಮಗಳು

ನಿಯಮಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ಯೋಗದಾತರು ನಿಯಂತ್ರಣ ಪ್ರಾಧಿಕಾರಕ್ಕೆ ಅಂದರೆ ಕಾರ್ಮಿಕ ಆಯುಕ್ತರು ಅಥವಾ ಕಾರ್ಮಿಕ ಆಯುಕ್ತ ರಿಂದ ಅಧಿಕಾರ ಪಡೆದ ಅಧಿಕಾರಿಗಳಿಗೆ ನಿಗದಿತ ನಮೂನೆಯಲ್ಲಿ, ಗ್ರಾಚ್ಯುಟಿ ಹೊಣೆಗಾರಿಕೆಗಾಗಿ ವಿಮೆ ಪಡೆದ ದಿನಾಂಕದಿಂದ 30 ದಿನಗಳ ಒಳಗೆ (ನಿಗದಿತ ನಮೂನೆ–1 ರಲ್ಲಿ) ಅರ್ಜಿಯನ್ನು ಸಲ್ಲಿಸ ಬೇಕಾಗುತ್ತದೆ. ಸದರಿ ನಮೂನೆಯಲ್ಲಿ ವಿಮೆಮಾಡಲಾದ ಉದ್ಯೋಗಿಗಳ ಸಂಖ್ಯೆ, ವಿಮಾ ಕಂಪನಿಯ ಹೆಸರು, ವಿಮಾಪಾಲಿಸಿ ಉಲ್ಲೇಖ ಸಂಖ್ಯೆಗಳು, ಲಗತ್ತಿಸಬೇಕಾದ ವಿಮಾ ಪಾಲಿಸಿಗಳನ್ನು ನಿಯಂತ್ರಿಸುವ ನಿಯಮಗಳು ಮುಂತಾದ ವಿವರಗಳನ್ನು ಒಳಗೊಂಡಿರುತ್ತದೆ. ಇದಲ್ಲದೆ ಈ ಕೆಳಗಿನ ನಮೂನೆಗಳನ್ನು ನಿಯಮಿತವಾಗಿ ಸಲ್ಲಿಸುವ ಅಗತ್ಯವಿದೆ.

1. ವಿಮಾ ಪಾಲಿಸಿ ಪ್ರಕಾರದ ಬದಲಾವಣೆಯ ವಿವರಗಳನ್ನು ಸಲ್ಲಿಸಬೇಕಾದ ನಮೂನೆಗಳು (ನಮೂನೆ–III)
2. ಉದ್ಯೋಗಿಗಳ ವಿವರಗಳಲ್ಲಿ ಬದಲಾವಣೆ ಅಥವಾ ವಿಮಾ ಉದ್ಯೋಗಿಗಳ ಸಂಖ್ಯೆಯಲ್ಲಿ ಬದಲಾವಣೆ ನಮೂನೆ.
3. ನಿಯಂತ್ರಣ ಪ್ರಾಧಿಕಾರದೊಂದಿಗೆ ಅಂದರೆ ಕಾರ್ಮಿಕ ಆಯುಕ್ತರು ಅಥವಾ ಕಾರ್ಮಿಕ ಆಯುಕ್ತ ರಿಂದ ಅಧಿಕಾರ ಪಡೆದ ಅಧಿಕಾರಿಗಳೊಂದಿಗೆ

ಯಾವುದೇ ಇತರ ಸಂಬಂಧಿತ ಮಾಹಿತಿ ನಮೂನೆ.

4. ವಿಮಾ ಪಾಲಿಸಿಯನ್ನು ಪಡೆದ ಸಂಸ್ಥೆಯ ಉದ್ಯೋಗದಾತರು ನಿಯಮಗಳ ಅಡಿಯಲ್ಲಿ ವಿಮಾ ಕಂಪನಿಗೆ ಪ್ರೀಮಿಯಂ ರೂಪದಲ್ಲಿ ಎಲ್ಲಾ ಪಾವತಿಗಳನ್ನು ಮಾಡಬೇಕಾಗುತ್ತದೆ ಮತ್ತು ಅದನ್ನು ನಿಯತಕಾಲಿಕವಾಗಿ ನವೀಕರಿಸಬೇಕಾಗುತ್ತದೆ. ಪಾಲಿಸಿಯ ಅವಧಿ ಮುಗಿಯುವ ಮೊದಲು ಉದ್ಯೋಗದಾತರು ಪ್ರೀಮಿಯಂ ಪಾವತಿ ಮತ್ತು ಪಾಲಿಸಿಯ ನವೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅಗತ್ಯವಿದೆ.

**ನೋಂದಣಿಗೆ ಕಾಲಮಿತಿ**

ಎಲ್ಲಾ ಹೊಸ ಉದ್ಯೋಗದಾತರು ಈ ನಿಯಮಗಳು ಅನ್ವಯವಾಗುವ ದಿನಾಂಕದಿಂದ 30 ದಿನಗಳ ಒಳಗೆ (ಅಂದರೆ, 30 ಜನವರಿ 2024 ರ ನಂತರ) ಭಾರತೀಯ ಜೀವ ವಿಮಾ ನಿಗಮದಿಂದ ("ಎಲ್.ಐ.ಸಿ") ಸರಿಯಾದ ಮಾನ್ಯತೆ ಯೊಂದಿಗೆ ವಿಮಾಪಾಲಿಸಿಯನ್ನು ಪಡೆಯಬೇಕಾಗುತ್ತದೆ; ಅಥವಾ ಅಂತಹ ವಿಮಾ ಕಂಪನಿಗಳಿಗೆ ಅನ್ವಯವಾಗುವ ಯಾವುದೇ ಇತರ ಕಾನೂನಿಗೆ ಅನುಗುಣವಾಗಿ ಸಂಯೋಜಿಸಲಾದ ಯಾವುದೇ ಇತರ ವಿಮಾ ಕಂಪನಿಯಿಂದಲೂ ಪಾಲಿಸಿ ಪಡೆಯಬಹದುದಾಗಿದೆ. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳ ಎಲ್ಲಾ ಅಸ್ತಿತ್ವದಲ್ಲಿರುವ ಉದ್ಯೋಗದಾತರು ಈ ನಿಯಮಗಳು ಪ್ರಾರಂಭವಾದ ದಿನಾಂಕ 'ದಿಂದ 60 ದಿನಗಳ ಒಳಗೆ (ಅಂದರೆ, 9 ಮಾರ್ಚ್ 2024 ರ ನಂತರ) ಗ್ರಾಚ್ಯುಟಿ ಹೊಣೆಗಾರಿಕೆ ವಿಮಾ ರಕ್ಷಣೆಯನ್ನು ಪಡೆಯಬೇಕಾಗುತ್ತದೆ.

**ಪಾವತಿ, ವರದಿ ಮಾಡುವ ಜವಾಬ್ದಾರಿಗಳು, ಮತ್ತು ನಿಯಂತ್ರಣ ಪ್ರಾಧಿಕಾರದ ಅಧಿಕಾರಗಳು**

- ಉದ್ಯೋಗದಾತರು ಪ್ರೀಮಿಯಂ ಅನ್ನು ಸಮಯಕ್ಕೆ ಸರಿಯಾಗಿ ಪಾವತಿಸಲಾಗಿದೆ ಮತ್ತು ನಿಯಮಿತವಾಗಿ ಪಾಲಿಸಿಯನ್ನು ನವೀಕರಿಸಲಾಗಿದೆ ಎಂದು ನಿಯಂತ್ರಣ ಪ್ರಾಧಿಕಾರ ಖಚಿತಪಡಿಸಿಕೊಳ್ಳುತ್ತದೆ.
- ಪಾಲಿಸಿಯ ನವೀಕರಣದ 15 ದಿನಗಳ ಒಳಗೆ ಉದ್ಯೋಗದಾತರು ಯಾವುದೇ ಬದಲಾವಣೆಗಳ ಬಗ್ಗೆ ನಿಯಂತ್ರಣ ಪ್ರಾಧಿಕಾರಕ್ಕೆ ತಿಳಿಸಬೇಕಾಗುತ್ತದೆ.
- ವಿವಾದಗಳ ಸಂದರ್ಭದಲ್ಲಿ, ಗ್ರಾಚ್ಯುಟಿ ಪಾವತಿ ಕಾಯ್ದೆಯಡಿ ನೇಮಕಗೊಂಡ ನಿಯಂತ್ರಣ ಪ್ರಾಧಿಕಾರ, ಅಥವಾ ರಾಜ್ಯ ಸರ್ಕಾರದಿಂದ ನೇಮಕ ಗೊಂಡ ಯಾವುದೇ ಇತರ ಅಧಿಕಾರಿಯು ಉದ್ಯೋಗಿಗೆ ಪಾವತಿಸಬೇಕಾದ ಗ್ರಾಚ್ಯುಟಿಯನ್ನು ಭಾರತೀಯ ಜೀವ ವಿಮಾ ನಿಗಮ (ಎಲ್.ಐ.ಸಿ) ಅಥವಾ ವಿಮೆಯನ್ನು ಒದಗಿಸಿದ ಇತರ ಯಾವುದೇ ವಿಮಾ ಕಂಪನಿಯಿಂದ ವಸೂಲಿ ಮಾಡಲು ಅಧಿಕಾರ ಹೊಂದಿದ್ದಾರೆ.

**ಕರ್ನಾಟಕ ಕಡ್ಡಾಯ ಗ್ರಾಚ್ಯುಟಿ ವಿಮಾ ನಿಯಮ-2024 ಕ್ಕೆ ವಿನಾಯಿತಿ**

ಉದ್ಯೋಗದಾತರು ಅನುಮೋದಿತ ಗ್ರಾಚ್ಯುಟಿ ಫಂಡ್ ಸ್ಥಾಪಿಸಿದ್ದಾರೆ ಮತ್ತು ಅಂತಹ ವ್ಯವಸ್ಥೆಯೊಂದಿಗೆ ಮುಂದುವರಿಯಲು ಅವಕಾಶವಿರುತ್ತದೆ ಮತ್ತು 500 ಅಥವಾ ಅದಕ್ಕಿಂತ ಹೆಚ್ಚಿನ ಜನರನ್ನು ನೇಮಿಸಿ ಕೊಂಡವರು ಮತ್ತು ಅನುಮೋದಿತ ಗ್ರಾಚ್ಯುಟಿ ನಿಧಿಯನ್ನು ಸ್ಥಾಪಿಸಿದವರು, ಕಡ್ಡಾಯ ಗ್ರಾಚ್ಯುಟಿ ವಿಮೆಯನ್ನು ತೆಗೆದುಕೊಳ್ಳುವುದರಿಂದ ಈ ಕೆಳಗಿನ ವಿವರಗಳನ್ನು ಸಲ್ಲಿಸುವ ಅಗತ್ಯವಿದೆ.

1. ವಿನಾಯಿತಿ ಪಡೆದ ಉದ್ಯೋಗದಾತರು ನಿಗದಿತ ನಮೂನೆಯಲ್ಲಿ (ಫಾರ್ಮ್-II) ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ;
2. ಅಸ್ತಿತ್ವದಲ್ಲಿರುವ ಅನುಮೋದಿತ ಗ್ರಾಚ್ಯುಟಿ ಫಂಡ್ ಸಂಸ್ಥೆಯ ಎಲ್ಲಾ ಉದ್ಯೋಗಿಗಳ ಸಂಪೂರ್ಣ ಹೊಣೆಗಾರಿಕೆಯನ್ನು ನೀಡುವುದು.
3. ವಿನಾಯಿತಿ ಪಡೆದ ಉದ್ಯೋಗದಾತರು ಐದು ಪ್ರತಿನಿಧಿಗಳು, ಉದ್ಯೋಗದಾತರು ಮತ್ತು ಉದ್ಯೋಗಿಗಳ ಮಿಶ್ರಣದೊಂದಿಗೆ ಗ್ರಾಚ್ಯುಟಿ ಟ್ರಸ್ಟ್‌ನ್ನು ಭಾರತೀಯ ಟ್ರಸ್ಟ್ ಕಾಯ್ದೆ- 1882 ರ ಅಡಿಯಲ್ಲಿ ಅಧಿಸೂಚಿತ ನೋಂದಣಿ ಪ್ರಾಧಿಕಾರದೊಂದಿಗೆ ನೋಂದಾಯಿಸ ಬೇಕಾಗುತ್ತದೆ.

**ಗ್ರಾಚ್ಯುಟಿ ಟ್ರಸ್ಟ್‌ನ ರಚನೆ ಮತ್ತು ನಿರ್ವಹಣೆ**

"ಬದಲಾಯಿಸಲಾಗದ ವ್ಯವಸ್ಥೆ" ಯಾಗಿ ನಿರ್ವಹಿಸಬೇಕಾದ ಗ್ರಾಚ್ಯುಟಿ ಟ್ರಸ್ಟ್‌ನ್ನು ಖಾಸಗಿಯಾಗಿ, ವಿಮಾ ಕಂಪನಿಯಿಂದ ಅಥವಾ ಜಂಟಿಯಾಗಿ, ಉದ್ಯೋಗದಾತರು ಅನುಮೋದಿತ ಗ್ರಾಚ್ಯುಟಿ ಟ್ರಸ್ಟ್ ನಿಧಿಗೆ ನಿಯತಕಾಲಿಕ ಪಾವತಿಗಳೊಂದಿಗೆ ನಿರ್ವಹಿಸಬಹುದು. ಗ್ರಾಚ್ಯುಟಿ ಟ್ರಸ್ಟ್ ಲೆಕ್ಕಪತ್ರ ಮಾನದಂಡಗಳಿಗೆ

ಬದ್ಧವಾಗಿರಬೇಕು. ಈ ಕಾಯ್ದೆಯಲ್ಲಿ ವಿವರಿಸಲಾದ ಹೊಣೆಗಾರಿಕೆಗಳ ಈಡೇರಿಕೆಗಾಗಿ ನಿಯಮಗಳು ಗ್ರಾಚ್ಯುಟಿ ಟ್ರಸ್ಟ್ ಮತ್ತು ವಿಮಾ ಕಂಪನಿಯ ಮೇಲೆ ಜಂಟಿ ಹೊಣೆಗಾರಿಕೆಯನ್ನು ಸೃಷ್ಟಿಸುತ್ತವೆ ಎಂಬುದನ್ನು ಗಮನಿಸುವುದು ಆಸಕ್ತಿದಾಯಕವಾಗಿದೆ. ಗ್ರಾಚ್ಯುಟಿ ನಿಧಿಗೆ ಕೊಡುಗೆಗಳ ಒಳಹರಿವು ಉದ್ಯೋಗದಾತ–ರಿಂದ ಕೊಡುಗೆಯಾಗಿರುತ್ತದೆ ಮತ್ತು ಉದ್ಯೋಗಿಗಳಿಗೆ ಕೊಡುಗೆಳಿರುವುದಿಲ್ಲ. ಖಾಸಗಿಯಾಗಿ ನಿರ್ವಹಿಸಲ್ಪಡುವ ಟ್ರಸ್ಟ್‌ನ ಸಂದರ್ಭದಲ್ಲಿ, ನಿಧಿಗಳ ಹೂಡಿಕೆಯು ಆದಾಯತೆರಿಗೆ ಕಾಯ್ದೆ, 1961 ರ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ವಿಮಾ ಕಂಪನಿಗಳಿಂದ ಗುಂಪು ಗ್ರಾಚ್ಯುಟಿ ಯೋಜನೆಗಳ ಸಂದರ್ಭದಲ್ಲಿ, ಉದ್ಯೋಗದಾತರು ಆದಾಯ ತೆರಿಗೆ ಕಾಯ್ದೆ, 1961 ರ ನಾಲ್ಕನೇ ಶೆಡ್ಯೂಲ್ನ ಭಾಗ–ಸಿ ಅಡಿಯಲ್ಲಿ ಅನುಮೋದಿಸಲಾದ ಪ್ರಯೋಜನಗಳನ್ನು ಪಡೆಯಬಹುದು.

ಗ್ರಾಚ್ಯುಟಿ ಫಂಡ್ ಪೂರ್ಣ ಸುರಕ್ಷಿತ ನಿಧಿಯಾಗಿದ್ದು, ಅರ್ಹ ಉದ್ಯೋಗಿಗಳಿಗೆ ಗ್ರಾಚ್ಯುಟಿ ಪಾವತಿಗಳನ್ನು ಮಾಡುವುದನ್ನು ಹೊರತುಪಡಿಸಿ ಇತರ ಉದ್ದೇಶಗಳಿಗಾಗಿ ಉದ್ಯೋಗದಾತರು ಅಥವಾ ಗ್ರಾಚ್ಯುಟಿ ಟ್ರಸ್ಟ್ ಯಾವುದೇ ಹಿಂಪಡೆಯುವಿಕೆಯನ್ನು ನಿಷೇಧಿಸುತ್ತದೆ. ಅರ್ಹ ಉದ್ಯೋಗಿಗಳು ಸೇವೆಯಿಂದ ನಿರ್ಗಮಿಸಿದ ನಂತರ ಮಾತ್ರ ಫಂಡ್ ಬಿಡುಗಡೆಗೆ ಅವಕಾಶವಿರುತ್ತದೆ.

**ಆದಾಯ ತೆರಿಗೆ ಪರಿಣಾಮ**

ಭಾರತೀಯ ಆದಾಯ ತೆರಿಗೆ ಕಾಯ್ದೆ, 1961 ರ ಸೆಕ್ಷನ್ 36 ರ ಪ್ರಕಾರ, ಬದಲಾಯಿಸಲಾಗದ ಟ್ರಸ್ಟ್ ಅಡಿಯಲ್ಲಿ ಉದ್ಯೋಗಿಗಳ ವಿಶೇಷ ಪ್ರಯೋಜನಕ್ಕಾಗಿ ಅನುಮೋದಿತ ಗ್ರಾಚ್ಯುಟಿ ನಿಧಿಗೆ ಕೊಡುಗೆಯ ಮೂಲಕ ಉದ್ಯೋಗದಾತರಾಗಿ ಪಾವತಿಸಿದ ಯಾವುದೇ ಮೊತ್ತವನ್ನು ಕೊಡುಗೆಯ ಪಾವತಿಯ ಷರತ್ತಿಗೆ ಒಳಪಟ್ಟು ರಿಯಾಯಿತಿಗೆ ಅನುಮತಿಸಲಾಗುತ್ತದೆ. ಅನುಮೋದಿತ ಗ್ರಾಚ್ಯುಟಿ ನಿಧಿಗೆ ಕೊಡುಗೆ ಪಾವತಿ ಅಥವಾ ಸಂಬಂಧಿತ ಹಣಕಾಸು ವರ್ಷದಲ್ಲಿ ವಾಸ್ತವವಾಗಿ ಪಾವತಿಸಬೇಕಾದ ಗ್ರಾಚ್ಯುಟಿ ಪಾವತಿಗೆ ಸಂಬಂಧಿಸಿದಂತೆ ವಿನಾಯಿತಿ ನೀಡಲಾಗುತ್ತದೆ.

ಜನವರಿ 10, 2024 ರಂದು ಸ್ಥಾಪಿಸಲಾದ ಕರ್ನಾಟಕ ಕಡ್ಡಾಯ ಗ್ರಾಚ್ಯುಟಿ ವಿಮಾ ನಿಯಮಗಳು, 2024, ಉದ್ಯೋಗದಾತರಿಗೆ ದೃಢವಾದ ಕಾರ್ಯ ವಿಧಾನವನ್ನು ಸೃಷ್ಟಿಸುತ್ತದೆ. ಸೂಕ್ತ ವಿಮಾ ರಕ್ಷಣೆಯನ್ನು ಕಡ್ಡಾಯಗೊಳಿಸುವುದರ ಜೊತೆಗೆ, ಈ ನಿಯಮಗಳು ಸಂಸ್ಥೆಗಳು ಉದ್ಯೋಗಿಗಳ ವಿವರಗಳನ್ನು ನೋಂದಾಯಿಸಲು ಮತ್ತು ಕಡ್ಡಾಯವಾಗಿ ಸಲ್ಲಿಸುವ ಮೂಲಕ ಉತ್ತರದಾಯಿತ್ವ ಮತ್ತು ಪಾರದರ್ಶಕತೆಗೆ ಬಲವಾದ ಒತ್ತು ನೀಡುತ್ತವೆ. ಹೊಸ ಮತ್ತು ಅಸ್ತಿತ್ವದಲ್ಲಿರುವ ಉದ್ಯೋಗದಾತರು ಪ್ರೀಮಿಯಂ ಪಾವತಿಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕು, ಸಮಯೋಚಿತ ಪಾಲಿಸಿ ನವೀಕರಣಗಳನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಯಾವುದೇ ಬದಲಾವಣೆಗಳ ಬಗ್ಗೆ ನಿಯಂತ್ರಣ ಪ್ರಾಧಿಕಾರಕ್ಕೆ ತಕ್ಷಣ ತಿಳಿಸಬೇಕು. ಗ್ರಾಚ್ಯುಟಿ ಪಾವತಿ ಕಾಯ್ದೆಯಡಿ ನೇಮಕಗೊಂಡ ಪ್ರಾಧಿಕಾರವು ವಿಮಾ ಪೂರೈಕೆದಾರರಿಂದ ಗ್ರಾಚ್ಯುಟಿಯನ್ನು ವಸೂಲಿ ಮಾಡುವ ಅಧಿಕಾರವನ್ನು ಸಹಹೊಂದಿದೆ. ಈ ನಿಯಮಗಳು ನ್ಯಾಯಯುತ ಕಾರ್ಮಿಕ ಪದ್ಧತಿಗಳಿಗೆ ಉದ್ಯೂಗದಾತರ ಬದ್ಧತೆಯನ್ನು ಸೂಚಿಸುತ್ತವೆ, ಅನುಸರಣೆ, ಪಾರದರ್ಶಕತೆ ಮತ್ತು ನೌಕರರ ಗ್ರಾಚ್ಯುಟಿ ಪ್ರಯೋಜನಗಳ ರಕ್ಷಣೆಯನ್ನು ಖಚಿತಪಡಿಸುತ್ತವೆ.

**ಮಾಹಿತಿ ಮೂಲ – ಕರ್ನಾಟಕ ರಾಜ್ಯ ಪತ್ರ ದಿನಾಂಕ 10.01.2024**

**ಸಂಗ್ರಹ : ಪಾಲ್‌ರಾಜ್ ಎ. ಅಧಿಕಾರಿ**

## ಫೆಬ್ರವರಿ – 2024 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 10 ಸೌಹಾರ್ದ ಸಹಕಾರಿಗಳಿಗೆ ಹಾಗೂ ಸದಸ್ಯ ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರ ರಾಜೀನಾಮೆಯಿಂದಾಗಿ ಕೋರಂ ಕೊರತೆ ಉಂಟಾಗಿರುವ 01 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಜನವರಿ ತಿಂಗಳಲ್ಲಿ ಒಟ್ಟು 11 ಸೌಹಾರ್ದ ಸಹಕಾರಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

## ಉದ್ಘಾಟನೆ



**ಗೌರಿಬಿದನೂರು** : ದಿನಾಂಕ 19.02.2024ರಂದು ಶ್ರೀ ಕನ್ನಿಕಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಗೌರಿಬಿದನೂರು ಸಹಕಾರಿಯ ನೂತನ ಕಟ್ಟಡ ಪ್ರಾರಂಭೋತ್ಸವ ಕಾರ್ಯಕ್ರಮವು ಜರುಗಿತು. ಕಾರ್ಯಕ್ರಮದಲ್ಲಿ ಗೌರಿಬಿದನೂರು ತಾಲೂಕಿನ ಮಾನ್ಯ ಶಾಸಕರಾದ ಶ್ರೀ ಪುಟ್ಟಸ್ವಾಮಿಗೌಡ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ಆರ್ ರವರು, ಶ್ರೀಮತಿ ಗಂಗಲಕ್ಷ್ಮಮ್ಮ ರವರು, ಶ್ರೀಮತಿ ಶೈಲಜಾ ರವರು, ಶ್ರೀ ವೆಂಕಟರಮಣಪ್ಪ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್. ರಮೇಶ್ ಬಾಬು ರವರು ಹಾಗೂ ಸಹಕಾರಿಯ ನಿರ್ದೇಶಕರು ಭಾಗವಹಿಸಿದ್ದರು.



ಶ್ರೀ ಟಿ. ಬಾಲಕೃಷ್ಣ

## ಭಾವಪೂರ್ಣ ಶ್ರದ್ಧಾಂಜಲಿ

ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಸಹಕಾರ ಟಿ.ವಿ. ಯ ಪ್ರಸಾರ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಟಿ. ಬಾಲಕೃಷ್ಣ ರವರು ದಿನಾಂಕ 02.03.2024 ರಂದು ಹೃದಯಘಾತದಿಂದ ನಿಧನರಾಗಿದ್ದಾರೆ. ಶ್ರೀಯುತರು ರಂಗ ಕಲಾವಿದರು, ನಟರು, ಸಹಕಾರ ಕ್ಷೇತ್ರದ ಬಗ್ಗೆ ಅನುಭವ ಹೊಂದಿದವರಾಗಿದ್ದಾರೆ. ಶ್ರೀಯುತರ ನಿಧನಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಬ್ಬಂದಿಯವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

## ಭೇಟಿ

**ತುಮಕೂರು** : ದಿನಾಂಕ 20.02.2024ರಂದು ಶ್ರೀ ಉದ್ದಾನೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಗೆ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ದಾಖಲೆಗಳನ್ನು ಪಡೆದುಕೊಳ್ಳಲಾಯಿತು ಹಾಗೂ ಕಾನೂನು ಸಲಹೆ ಹಾಗೂ ಮಾರ್ಗದರ್ಶನ ನೀಡಲಾಯಿತು. ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

**ತುಮಕೂರು** : ದಿನಾಂಕ 20.02.2024ರಂದು ಶ್ರೀ ವಲ್ಮೀಕ ಸೌಹಾರ್ದ ಸಹಕಾರಿ ನಿ, ತುಮಕೂರು ಸಹಕಾರಿಗೆ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ದಾಖಲೆಗಳನ್ನು ಪಡೆದುಕೊಳ್ಳಲಾಯಿತು ಹಾಗೂ ಕಾನೂನು ಸಲಹೆ ಹಾಗೂ ಮಾರ್ಗದರ್ಶನ ನೀಡಲಾಯಿತು. ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ**



ಶ್ರೀ ಎಂ. ಕೆ ರಮೇಶ್
ಅಧ್ಯಕ್ಷರು



ಶ್ರೀ ಶ್ರೇಯಸ್ ಹೆಚ್.ಪಿ
ಉಪಾಧ್ಯಕ್ಷರು

# ದಿನಾಂಕ 16 ಫೆಬ್ರವರಿ 2024ರಂದು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ವಿಧಾನ ಸಭೆಯಲ್ಲಿ ಮಂಡಿಸಿದ 2024-25ನೇ ಸಾಲಿನ ಆಯವ್ಯಯದ ಪ್ರಮುಖ ಅಂಶಗಳು

ಸಂಗ್ರಹ : ದಿವ್ಯ ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು.

## ಆಯವ್ಯಯ ಪಕ್ಷಿನೋಟ

- ಆಯವ್ಯಯ ಗಾತ್ರ (ಸಂಚಿತ ನಿಧಿ) – 3,71,383 ಕೋಟಿ ರೂ.
- ಒಟ್ಟು ಸ್ವೀಕೃತಿ– 3,68,674 ಕೋಟಿ ರೂ.; ರಾಜಸ್ವ ಸ್ವೀಕೃತಿ 2,63,178 ಕೋಟಿ ರೂ., ಸಾರ್ವಜನಿಕ ಋಣ – 1,05,246 ಕೋಟಿ ರೂ. ಸೇರಿದಂತೆ ಬಂಡವಾಳ ಸ್ವೀಕೃತಿ 38 ಕೋಟಿ ರೂ.
- ಒಟ್ಟು ವೆಚ್ಚ – 3,71,383 ಕೋಟಿ ರೂ., ರಾಜಸ್ವ ವೆಚ್ಚ – 2,90,531 ಕೋಟಿ ರೂ., ಬಂಡವಾಳ ವೆಚ್ಚ – 55,877 ಕೋಟಿ ರೂ. ಹಾಗೂ ಸಾಲ ಮರುಪಾವತಿ – 24,794 ಕೋಟಿ ರೂ.
- ಎಸ್.ಸಿ.ಎಸ್.ಪಿ. ಹಾಗೂ ಟಿ.ಎಸ್.ಪಿ. ಅಡಿಯಲ್ಲಿ ಅಯವ್ಯಯದಲ್ಲಿ ಒದಗಿಸಿದ ಅನುದಾನ 39,121 ಕೋಟಿ ರೂ. ಎಸ್.ಸಿ.ಎಸ್.ಪಿ. ಅಡಿ 27,674 ಕೋಟಿ ರೂ. ಹಾಗೂ ಟಿ.ಎಸ್.ಪಿ. ಅಡಿ 11.447 ಕೋಟಿ ರೂ.
- ಮಹಿಳಾ ಆಯವ್ಯಯದಲ್ಲಿ ಒದಗಿಸಿದ ಅನುದಾನ 86,423 ಕೋಟಿ ರೂ.
- ಮಕ್ಕಳ ಆಯವ್ಯಯದಲ್ಲಿ ಒದಗಿಸಿದ ಅನುದಾನ – 54,617 ಕೋಟಿ ರೂ.

## 2024–25ನೇ ಸಾಲಿನ ಹೊಸ ಯೋಜನೆಗಳು

ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ, ಸಹಕಾರ, ಜಲಸಂಪನ್ಮೂಲ, ಸಣ್ಣ ನೀರಾವರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಉನ್ನತ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ವಸತಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು, ಕಾರ್ಮಿಕ, ಕೌಶಲ್ಯಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಯೋಜನೆ, ನಗರಾಭಿವೃದ್ಧಿ, ಇಂಧನ, ಲೋಕೋಪಯೋಗಿ, ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ, ವಾಣಿಜ್ಯ ಮತ್ತು ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡೆ, ಪ್ರವಾಸೋದ್ಯಮ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ, ಕಂದಾಯ, ಧಾರ್ಮಿಕ ದತ್ತಿ, ಇ–ಆಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಒಳಾಡಳಿತ, ಸಾರಿಗೆ, ಕಾನೂನು, ತೆರಿಗೆ ಪ್ರಸ್ತಾವನೆಗಳು – ವಾಣಿಜ್ಯ ತೆರಿಗೆಗಳು, ನೋಂದಣಿ ಮತ್ತು ಮುದ್ರಾಂಕ, ಅಬಕಾರಿ, ಸಾರಿಗೆ, ಗಣಿ ಮತ್ತು ಭೂವಿಜ್ಞಾನ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ 2024–25ನೇ ಸಾಲಿನ ಹೊಸ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ.

## ಆಯವ್ಯಯದ ಆಯ್ದ ಪ್ರಮುಖಾಂಶಗಳು

**ಕೃಷಿ :** ವಿವಿಧ ರೈತಪರ ಯೋಜನೆಗಳನ್ನು ಒಗ್ಗೂಡಿಸಿ ಸಮಗ್ರ ಕೃಷಿ ಉತ್ತೇಜಿಸುವ ಕರ್ನಾಟಕ ರೈತ ಸಮೃದ್ಧಿ ಯೋಜನೆ ಜಾರಿ : ಕೃಷಿ ಅಭಿವೃದ್ಧಿ ಪ್ರಾಧಿಕಾರ ರಚನೆ – "ನಮ್ಮ ಮಿಲ್ಲೆಟ್" ಹೊಸ ಯೋಜನೆ – e-SAP ತಂತ್ರಾಂಶದ ಪರಿಚಯ – ಪ್ರತ್ಯೇಕ ಕೃಷಿ ಆಯುಕ್ತಾಲಯ ಸ್ಥಾಪನೆ – PMFME ಯೋಜನೆಯಡಿ 80 ಕೋಟಿ ರೂ. – ಆಹಾರ ಪಾರ್ಕ್ ಸ್ಥಾಪನೆ.

**ತೋಟಗಾರಿಕೆ :** ಕಿಸಾನ್ ಮಾಲ್ ಸ್ಥಾಪನೆ – ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಂತಾರಾಷ್ಟ್ರೀಯ ಮಟ್ಟದ ವಾಣಿಜ್ಯ ಪುಷ್ಪ ಮಾರುಕಟ್ಟೆ ಸ್ಥಾಪನೆ – ಕೊಯ್ಲೋತ್ತರ ನಿರ್ವಹಣಾ ಕೇಂದ್ರ (Packhouse) ಹಾಗೂ ಮೌಲ್ಯವರ್ಧನ ಸಂಸ್ಕರಣಾ ಘಟಕಗಳ ಸ್ಥಾಪನೆ – ಸ್ಪೈಸ್ ಪಾರ್ಕ್ (Spice Park) ಅಭಿವೃದ್ಧಿ – ತೋಟಗಾರಿಕೆ ಕಾಲೇಜು ಸ್ಥಾಪನೆ.

**ರೇಷ್ಮೆ :** ಅತ್ಯಾಧುನಿಕ ರೇಷ್ಮೆ ಮಾರುಕಟ್ಟೆ ನಿರ್ಮಾಣದ ಎರಡನೇ ಹಂತ ಕಾಮಗಾರಿ – ಕಚ್ಚಾ ರೇಷ್ಮೆಗೆ ಪ್ರೋತ್ಸಾಹ ಧನ ನೀಡಲು 12 ಕೋಟಿ ರೂ. ಅನುದಾನ – ಬೈವೋಲ್ಟೀನ್ ರೇಷ್ಮೆ ಗೂಡುಗಳಿಗೆ ನೀಡುವ ಪ್ರೋತ್ಸಾಹಧನ ಪ್ರತಿ ಕಿಲೋಗೆ 30 ರೂ. ಗೆ ಹೆಚ್ಚಳ.

**ಪಶುಸಂಗೋಪನೆ :** ಕರ್ನಾಟಕ ರೈತ ಸಮೃದ್ಧಿ ಯೋಜನೆಯೊಂದಿಗೆ ಸಂಯೋಜಿಸಿ ಕುರಿ ಸಾಕಾಣಿಕೆ, ಹೈನುಗಾರಿಕೆ, ಹಂದಿ ಮತ್ತು ಕೋಳಿ ಸಾಕಾಣಿಕೆಗೆ ಉತ್ತೇಜನ.

**ಮೀನುಗಾರಿಕೆ :** ಮೀನುಗಾರಿಕೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ

ವಿವಿಧ ಯೋಜನೆಗಳ ಅನುಷ್ಠಾನ – ಮೀನುಗಾರರ ರಕ್ಷಣೆಗೆ ಸಮುದ್ರ ಅಂಬ್ಯುಲೆನ್ಸ್ ಖರೀದಿ – ಮತ್ಸ್ಯ ಆಶಾಕಿರಣ ಯೋಜನೆಯಡಿ ಕರಾವಳಿ ಮೀನುಗಾರರ ಪರಿಹಾರದ ರಾಜ್ಯದ ಪಾಲು 3,000 ರೂ. ಗಳಿಗೆ ಹೆಚ್ಚಳ – 10,000 ವಸತಿರಹಿತ ಮೀನುಗಾರರಿಗೆ ಮನೆ ನಿರ್ಮಿಸಲು ಸಹಾಯಧನ.

**ಸಹಕಾರ :** ಪ್ರಸಕ್ತ ಸಾಲಿನಲ್ಲಿ ರಾಜ್ಯದ 36 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 27,000 ಕೋಟಿ ರೂ.ಗಳಷ್ಟು ದಾಖಲೆಯ ಬೆಳೆ ಸಾಲ ವಿತರಣೆ ಗುರಿ. – ಸರ್ಕಾರದ ಹಿಂದಿನ ಅವಧಿಯ ಬೆಳೆಸಾಲ ಮನ್ನಾ ಬಾಬ್ತು ಬಾಕಿ ಇರುವ 132 ಕೋಟಿ ರೂ. ಮೊತ್ತ ಡಿಸಿಸಿ ಬ್ಯಾಂಕುಗಳಿಗೆ ಬಿಡುಗಡೆ; ಮಧ್ಯಮಾವಧಿ ಮತ್ತು ದೀರ್ಘಾವಧಿ ಸುಸ್ತಿ ಸಾಲಗಳ ಬಡ್ಡಿ ಮನ್ನಾ ಹಿನ್ನೆಲೆಯಲ್ಲಿ ಡಿಸಿಸಿ ಮತ್ತು ಪಿಕಾರ್ಡ್ ಬ್ಯಾಂಕುಗಳಿಗೆ 450 ಕೋಟಿ ರೂ. ಅನುದಾನ; ಟಿ.ಎ.ಪಿ.ಸಿ.ಎಂ.ಎಸ್.ಗಳಿಗೆ ಗೋದಾಮು ನಿರ್ಮಾಣಕ್ಕೆ ಶೇ.6ರ ಬಡ್ಡಿ ಸಹಾಯಧನ – ಕೃಷಿ ಉತ್ಪನ್ನ ಸಂಸ್ಕರಣೆ, ಮಾರುಕಟ್ಟೆ ಸಂಪರ್ಕ ಮತ್ತು ಮೌಲ್ಯವರ್ಧನೆಗೆ ಪೂರಕ ಕ್ರಮಗಳು:

**ಜಲಸಂಪನ್ಮೂಲ :** ಪ್ರಸಕ್ತ ಸಾಲಿನಲ್ಲಿ ಯೋಜನೆಯ ಎಲ್ಲಾ ಲಿಫ್ಟ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಗುರುತ್ವ ಕಾಲುವೆಗೆ ನೀರು ಹರಿಸಲು ಕ್ರಮ.

**ಸಣ್ಣ ನೀರಾವರಿ :** 200 ಕೋಟಿ ರೂ. ವೆಚ್ಚದಲ್ಲಿ 115 ಜಲ ಸಂರಕ್ಷಣಾ ಕಾಮಗಾರಿ ಅನುಷ್ಠಾನ.

**ಶಾಲಾ ಶಿಕ್ಷಣ ಮತ್ತು ಸಾಕ್ಷರತೆ :** ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಅಗತ್ಯ ಮೂಲಸೌಕರ್ಯ ಒದಗಿಸಲು ಸಿ.ಎಸ್.ಆರ್. ಅನುದಾನದಡಿ, ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಆಯ್ದ ಶಾಲೆಗಳ ಉನ್ನತೀಕರಣ: 3 ರಿಂದ 5 ನೇ ತರಗತಿ ವಿದ್ಯಾರ್ಥಿಗಳಿಗೆ ಗಣಿತ–ಗಣಕ ಕಾರ್ಯಕ್ರಮ, ಮರು ಸಿಂಚನ ಕಾರ್ಯಕ್ರಮ; ಆಯ್ದ ಪ್ರೌಢ ಶಾಲೆಗಳಲ್ಲಿ ವಿಜ್ಞಾನ ಹಾಗೂ ಕಂಪ್ಯೂಟರ್ ಪ್ರಯೋಗಾಲಯ, ಇಂಟರ್‌ನೆಟ್ ಸೌಲಭ್ಯ.

ಉನ್ನತ ಶಿಕ್ಷಣ : ರಾಜ್ಯದ 30 ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳ ಉನ್ನತೀಕರಣ – ಐಐಟಿ ಮಾದರಿಯಲ್ಲಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ (UVCE) ಅಭಿವೃದ್ಧಿ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ :** ಕ್ರಿಟಿಕಲ್ ಕೇರ್ ಬ್ಲಾಕ್ ಕಟ್ಟಡ ನಿರ್ಮಾಣ – 100 ಹಾಸಿಗೆ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆ ನಿರ್ಮಾಣ – 25 ಪ್ರಾಥಮಿಕ ಆರೋಗ್ಯ ಕೇಂದ್ರ ಉನ್ನತೀಕರಣ – ಕಲ್ಯಾಣ ಕರ್ನಾಟಕ ಭಾಗದಲ್ಲಿ 46 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ – ಪ್ರತಿ ಜಿಲ್ಲೆಯಲ್ಲಿ ಒಂದು ಡೇ–ಕೇರ್ ಕಿಮೋಥೆರಪಿ ಕೇಂದ್ರ ಸ್ಥಾಪನೆ.

**ವೈದ್ಯಕೀಯ ಶಿಕ್ಷಣ :** 2024–25ನೇ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕೆ ಅನುದಾನ – ಮೈಸೂರಿನಲ್ಲಿರುವ 40 ಹಾಸಿಗೆ ಸಾಮರ್ಥ್ಯದ Nephro-Urology ಆಸ್ಪತ್ರೆಯ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ಉನ್ನತೀಕರಣ – ಬೆಂಗಳೂರಿನ ನೆಫ್ರೋ–ಯುರಾಲಜಿ ಸಂಸ್ಥೆಯ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸಾ ಸೌಲಭ್ಯ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ :** ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಮೇಲ್ವಿಚಾರಕಿಯರಿಗೆ ಸ್ಮಾರ್ಟ್ ಫೋನ್ ಒದಗಿಸಲು ಕ್ರಮ – ರಾಜ್ಯದಲ್ಲಿ 1000 ಅಂಗನವಾಡಿ ನಿರ್ಮಾಣ.

**ಸಮಾಜ ಕಲ್ಯಾಣ :** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಒದಗಿಸಲು Corpus Fund ಸ್ಥಾಪನೆ.

**ಪರಿಶಿಷ್ಟ ಪಂಗಡಗಳ ಕಲ್ಯಾಣ :** IISc, IIT ಮತ್ತು NIT ಸಂಸ್ಥೆಗಳ ಮೂಲಕ ವೃತ್ತಿಪರ ತರಬೇತಿ ಕೋರ್ಸ್‌ಗೆ ದಾಖಲಾಗುವ 200 ಇಂಜಿನಿಯರಿಂಗ್ ಪದವೀಧರರಿಗೆ 15,000 ರೂ. ಗಳ ಶಿಷ್ಯವೇತನ ನೀಡಲು ಕ್ರಮ – 5,000 ಯುವಕ/ಯುವತಿಯರಿಗೆ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ತರಬೇತಿ.

**ಹಿಂದುಳಿದ ವರ್ಗಗಳ ಕಲ್ಯಾಣ :** ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ CLAT, MAT ಮತ್ತು Chartered Accountant ಫೌಂಡೇಷನ್ ಪರೀಕ್ಷಾ ಪೂರ್ವ ತರಬೇತಿ – 500 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಎರಡು ವರ್ಷಗಳ JEE/NEET ಉಚಿತ ತರಬೇತಿ ನೀಡಲು ಕ್ರಮ.

**ಅಲ್ಪಸಂಖ್ಯಾತರ ಕಲ್ಯಾಣ :** 50 ಸಂಖ್ಯಾಬಲವುಳ್ಳ 50 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 100 ಸಂಖ್ಯಾಬಲವುಳ್ಳ 100 ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು, 100 ಹೊಸ ಮೌಲಾನಾ ಆಜಾದ್ ಶಾಲೆಗಳ ಪ್ರಾರಂಭ ಹಾಗೂ 25 ಶಾಲೆಗಳಲ್ಲಿ ಪದವಿ ಪೂರ್ವ ಶಿಕ್ಷಣ ಪ್ರಾರಂಭ – ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳ ಉನ್ನತೀಕರಣಕ್ಕೆ ಏಖಈಅ ಮೂಲಕ ಪಡೆಯುವ 10 ಕೋಟಿ ರೂ.ವರೆಗಿನ ಸಾಲಕ್ಕೆ ಶೇ.6 ರಷ್ಟು ಬಡ್ಡಿ ಸಹಾಯಧನ ಸೌಲಭ್ಯ – ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಉತ್ತೇಜನ ನೀಡಲು 10 ಕೋಟಿ ರೂ. ಅನುದಾನ.

**ವಸತಿ :** 2024–25ರಲ್ಲಿ 3 ಲಕ್ಷ ಮನೆಗಳ ನಿರ್ಮಾಣದ ಗುರಿ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು : 80 ವರ್ಷ ದಾಟಿದ ಹಿರಿಯ ನಾಗರಿಕರು ಮಾತ್ರ ಇರುವ ಮನೆಯ ಬಾಗಿಲಿಗೆ ಆಹಾರ ಧಾನ್ಯಗಳನ್ನು ತಲುಪಿಸಲು ಅನ್ನ–ಸುವಿಧಾ ಯೋಜನೆ ಜಾರಿ.

**ಕಾರ್ಮಿಕ :** Platform-Based Gig Workers Fund and Welfare Fee Bill ಎಂಬ ಹೊಸ ವಿಧೇಯಕ ಜಾರಿಯ ಮೂಲಕ ಗಿಗ್ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮ ರೂಪಿಸಲು ಕ್ರಮ.

**ಕೌಶಲ್ಯಾಭಿವೃದ್ಧಿ :** ರಾಜ್ಯ ಕೌಶಲ್ಯ ನೀತಿ ಜಾರಿ – ಉದ್ಯಮಶೀಲತಾ ಅಭಿವೃದ್ಧಿ ತರಬೇತಿ – ಸ್ಕಿಲ್ ಅಕಾಡೆಮಿ ಸ್ಥಾಪನೆ – ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ – ಹೊಸ ಜಿ.ಟಿ.ಟಿ.ಸಿ ಗಳ ಪ್ರಾರಂಭ – ಮೊದಲ ಶ್ರೇಷ್ಠತಾ ಕೇಂದ್ರ ಸ್ಥಾಪನೆ – ಎರಡು ವರ್ಷದಲ್ಲಿ 50,000 ಎಸ್.ಹೆಚ್.ಜಿ. ಮಹಿಳಾ ಸ್ವಾಮ್ಯದ ಸೂಕ್ಷ್ಮ ಉದ್ಯಮಗಳ ಅಭಿವೃದ್ಧಿಗೆ ಕ್ರಮ ಹಾಗೂ ಒಂದು ಲಕ್ಷ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ 100 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಿರು ಉದ್ದಿಮೆಗಳನ್ನು ಸ್ಥಾಪಿಸಲು ಮತ್ತು ಅವುಗಳಿಗೆ ಸೂಕ್ತ ಮಾರುಕಟ್ಟೆ ಅವಕಾಶಗಳನ್ನು ಕಲ್ಪಿಸಲು ಕ್ರಮ – ಐಐಎಂಬಿ ಸಹಭಾಗಿತ್ವದಲ್ಲಿ 10 ಜಿಲ್ಲಾ ಮಟ್ಟದ ಇನ್‌ಕ್ಯುಬೇಷನ್ ಕೇಂದ್ರಗಳ ಸ್ಥಾಪನೆ – ಗ್ರಾಮೀಣ ಪ್ರದೇಶದಲ್ಲಿ ಕೆಫೆ ಸಂಜೀವಿನಿ ಎಂಬ ಮಹಿಳೆಯರೇ ನಡೆಸುವ ಕ್ಯಾಂಟೀನ್‌ಗಳ ಸ್ಥಾಪನೆ ಹಾಗೂ 2,500 ಕಾಫಿ ಕಿಯಾಸ್ಕ್ ಸ್ಥಾಪನೆಗೆ ಕ್ರಮ.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ :** 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಒಟ್ಟಾರೆ 9,450 ಕಿ.ಮೀ. ಉದ್ದದ ರಸ್ತೆ ಸಂಪರ್ಕ ಜಾಲ ಅಭಿವೃದ್ಧಿ – ಕಲ್ಯಾಣ ಕರ್ನಾಟಕದ 38 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಒಟ್ಟು 1,150 ಕಿ.ಮೀ. ರಸ್ತೆ ಅಭಿವೃದ್ಧಿ – ನರೇಗಾ ಯೋಜನೆಯಡಿ 2024–25 ರಲ್ಲಿ 16 ಕೋಟಿ ಮಾನವ ದಿನಗಳನ್ನು ಸೃಜನೆಯ ಗುರಿ – ಗ್ರಾಮ ಪಂಚಾಯತಿಗಳಲ್ಲಿನ ವಿದ್ಯುತ್ ವೆಚ್ಚ ಕಡಿಮೆ ಮಾಡಲು 50 ಪಂಚಾಯಿತಿಗಳಲ್ಲಿ ಸೋಲಾರ್ ದೀಪ ಅಳವಡಿಕೆ ಹಾಗೂ 200 ಪಂಚಾಯಿತಿಗಳಲ್ಲಿ ಬೀದಿ ದೀಪಗಳ ವ್ಯವಸ್ಥಿತ ಮೀಟರಿಂಗ್ ಮಾಡಲು ಕಮ.

**ನಗರಾಭಿವೃದ್ಧಿ :** ಬ್ರಾಂಡ್ ಬೆಂಗಳೂರು ಪರಿಕಲ್ಪನೆ ಜಾರಿ – ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಆದ್ಯತೆ – ಬೆಂಗಳೂರು ಮೆಟ್ರೋ ಜಾಲಕ್ಕೆ 2025ರ ಮಾರ್ಚ್ ವೇಳೆಗೆ ಹೆಚ್ಚುವರಿಯಾಗಿ 44 ಕಿ.ಮೀ. ಮಾರ್ಗ ಸೇರ್ಪಡೆ – ಮೂಲಸೌಕರ್ಯ ಅಭಿವೃದ್ಧಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ 2.0 ಯೋಜನೆ ಜಾರಿ – ಅಮೃತ್ 2.0 ಕೇಂದ್ರ ಪುರಸ್ಕೃತ ಯೋಜನೆಯಡಿ ನಲ್ಲಿ ಸಂಪರ್ಕದ ಮೂಲಕ ಕುಡಿಯುವ ನೀರು ಒದಗಿಸುವ ಗುರಿ – ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ 2.0 ಅಡಿಯಲ್ಲಿ ದ್ರವ ತ್ಯಾಜ್ಯಗಳ ಸಂಸ್ಕರಣೆ, ಲೆಗೆಸಿ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿಗೆ ಆದ್ಯತೆ – ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಗಳಾಗಿ ಉನ್ನತೀಕರಣ.

**ಇಂಧನ :** ಮುಂದಿನ 7 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ 60 ಗಿಗಾ ವ್ಯಾಟ್‌ಗಳಿಗೆ ಹೆಚ್ಚಿಸುವ ಗುರಿ – ಕೆಪಿಸಿಎಲ್ ವತಿಯಿಂದ ತೇಲುವ (Floating) ಸೌರ ಹಾಗೂ ಭೂಸ್ಥಾಪಿತ (Ground mounted) ಸೌರ ಯೋಜನೆಗಳ ಅನುಷ್ಠಾನಕ್ಕೆ ಕ್ರಮ – ಕೃಷಿ ಪಂಪ್ ಸೆಟ್ ಫೀಡರ್ ಸೌರೀಕರಣ ಯೋಜನೆ ಹಂತ–II ಅಡಿಯಲಿ ಐ.ಪಿ. ಸೆಟ್‌ಗಳನ್ನು ಸೌರೀಕರಣಗೊಳಿಸಲು ಕ್ರಮ – ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 2,500 ಇಗಿ ಉುಚಿಡಿರುಟಿರ ಕೇಂದ್ರಗಳು ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಮೂಲಕ 35 ಕೋಟಿ ರೂ. ವೆಚ್ಚದಲ್ಲಿ 100 ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ.

**ಲೋಕೋಪಯೋಗಿ :** ಪ್ರಸಕ್ತ ಸಾಲಿನಲ್ಲಿ ಕೆಶಿಪ್–4 ಯೋಜನೆಯಡಿ ಬಾಹ್ಯ ಹಣಕಾಸು ಸಂಸ್ಥೆಯ ನೆರವಿನೊಂದಿಗೆ 875 ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ಅಭಿವೃದ್ಧಿ – ರಾಜ್ಯದಲ್ಲಿ 1300 ಕಿ.ಮೀ. ಉದ್ದದ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ (SHDP) ಹಂತ–5 ಪ್ರಾರಂಭ – 6 ರೈಲ್ವೆ ಮೇಲು ಮತ್ತು ಕೆಳ ಸೇತುವೆಗಳ ನಿರ್ಮಾಣ.

**ಕನ್ನಡ ಮತ್ತು ಸಂಸ್ಕೃತಿ :** ಬಸವಾದಿ ಶರಣರ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಆಯೋಜನೆ – ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ರಚನೆ – ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡವನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ.

**ಯುವ ಸಬಲೀಕರಣ ಮತ್ತು ಕ್ರೀಡೆ :** ಕ್ರೀಡಾಪಟುಗಳಿಗೆ ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಶೇ.2ರಷ್ಟು ಹುದ್ದೆ ಮೀಸಲು.

**ಪ್ರವಾಸೋದ್ಯಮ :** ರಾಜ್ಯದಲ್ಲಿ ಪರಿಷ್ಕೃತ ಪ್ರವಾಸೋದ್ಯಮ ನೀತಿ 2024–29 ಅನ್ನು ಜಾರಿಗೆ ತರಲು ಕ್ರಮ.

**ಕಂದಾಯ :** ಡಿಜಿ ಕಂದಾಯ ಯೋಜನೆಯಡಿ ಕಂದಾಯ ಇಲಾಖೆಯು ನೀಡುವ ಎಲ್ಲಾ ಸೇವೆಗಳನ್ನು ಡಿಜಿಟಲ್ ಪ್ಲಾಟ್‌ಫಾರ್ಮ್ ಮೂಲಕ ಸಾರ್ವಜನಿಕರಿಗೆ ಒದಗಿಸಲು ಕ್ರಮ.

**ಇ–ಆಡಳಿತ :** ಸೈಬರ್ ದಾಳಿಗಳನ್ನು ಪರಿಣಾಮಕಾರಿಯಾಗಿ

20ನೇ ಪುಟಕ್ಕೆ.....

# ದಿನಾಂಕ 01 ಫೆಬ್ರವರಿ 2024ರಂದು ಭಾರತ ಸರ್ಕಾರದ ಮಾನ್ಯ ಹಣ-ಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಸಂಸತ್ತಿನಲ್ಲಿ ಮಂಡಿಸಿದ 2024-25ನೇ ಸಾಲಿನ ಮಧ್ಯಂತರ ಕೇಂದ್ರ ಬಜೆಟ್‌ನ ಪ್ರಮುಖ ಅಂಶಗಳು

**ಮೂಲ : ಪತ್ರಿಕಾ ಮಾಹಿತಿ ಬ್ಯೂರೋ, ಭಾರತ ಸರ್ಕಾರ** **ಅನುವಾದ : ದಿವ್ಯ ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು**

- ಆರ್ಥಿಕ ವರ್ಷ 2023–24ನೇ ಸಾಲಿನಲ್ಲಿ ಭಾರತದ ನೈಜ ಜಿಡಿಪಿ ಶೇಕಡಾ 7.3ರಷ್ಟು ಬೆಳವಣಿಗೆಯಾಗಲಿದೆ ಎಂದು ಯೋಜಿಸಲಾಗಿದೆ.
- ಆರ್ಥಿಕ ವರ್ಷ 2023–24ನೇ ಸಾಲಿನಲ್ಲಿ ಭಾರತದ ನೈಜ ಜಿಡಿಪಿ ಶೇಕಡಾ 7.3ರಷ್ಟು ಬೆಳವಣಿಗೆಯಾಗಲಿದೆ ಎಂದು ಯೋಜಿಸಲಾಗಿದೆ.
- ಮುಂದಿನ ವರ್ಷಕ್ಕೆ ಬಂಡವಾಳ ವೆಚ್ಚವನ್ನು ಶೇಕಡಾ 11.1 ರಿಂದ ರೂ.11,11,111 ಕೋಟಿಗೆ ಹೆಚ್ಚಿಸಲಾಗುತ್ತಿದೆ, ಇದು ಜಿಡಿಪಿಯ ಶೇಕಡಾ 3.4 ಆಗಿರುತ್ತದೆ.
- 2024–25ರಲ್ಲಿನ ಹಣಕಾಸಿನ ಕೊರತೆಯು ಜಿಡಿಪಿಯ ಶೇಕಡಾ 5.1 ಎಂದು ಅಂದಾಜಿಸಲಾಗಿದೆ.
- 2014–23ರ ಅವಧಿಯಲ್ಲಿ ಎಫ್‌ಡಿಐ ಒಳಹರಿವು ಯುಎಸ್‌ಡಿ 596 ಡಾಲರ್ ಆಗಿತ್ತು, ಇದು 2005–14ರಲ್ಲಿನ ಒಳಹರಿವಿನ ಎರಡು ಪಟ್ಟು.
- 'ಗರೀಬ್' (ಬಡವರು), 'ಮಹಿಳೆಯೇನ್' (ಮಹಿಳೆಯರು), 'ಯುವ' (ಯುವಕರು) ಮತ್ತು 'ಅನ್ನದಾತ' (ರೈತರು) ಇವರ ಉನ್ನತೀಕರಣವು ಸರ್ಕಾರದ ಅತ್ಯುನ್ನತ ಆದ್ಯತೆಯಾಗಿದೆ.
- ಯುವಕರಿಗೆ ಐವತ್ತು ವರ್ಷಗಳ ಬಡ್ಡಿ ರಹಿತ ಸಾಲಕ್ಕಾಗಿ ಒಂದು ಲಕ್ಷ ಕೋಟಿ ರೂಪಾಯಿಗಳ ಕಾರ್ಪಸ್ ಸ್ಥಾಪನೆ.
- ರಾಜ್ಯಗಳಿಗೆ 50 ವರ್ಷಗಳ ಬಡ್ಡಿ ರಹಿತ ಸಾಲಕ್ಕಾಗಿ ಕ್ಯಾಪೆಕ್ಸ್ ಯೋಜನೆಯು ಈ ವರ್ಷವೂ ರೂ.1.3 ಲಕ್ಷ ಕೋಟಿಗಳ ಒಟ್ಟು ಮೊತ್ತದೊಂದಿಗೆ ಮುಂದುವರೆಯುತ್ತದೆ.
- ಸರ್ವಾಂಗೀಣ, ಸರ್ವವ್ಯಾಪಕ ಮತ್ತು ಎಲ್ಲವನ್ನು ಒಳಗೊಳ್ಳುವ ಅಭಿವೃದ್ಧಿಯ ವಿಧಾನದೊಂದಿಗೆ ಸರ್ಕಾರವು ಕಾರ್ಯನಿರ್ವಹಿಸುತ್ತಿದೆ.
- 2047ರ ಹೊತ್ತಿಗೆ ಮೇಕಿಂಗ್ ಇಂಡಿಯಾ, ವಿಕ್ಷಿತ್ ಭಾರತ್‌ಗೆ ಸಂಬಂಧಿಸಿದ ನಿರ್ದೇಶನಗಳು ಮತ್ತು ಅಭಿವೃದ್ಧಿ ವಿಧಾನವನ್ನು ಸೂಚಿಸುವ ಹಲವಾರು ಘೋಷಣೆಗಳು ಮತ್ತು ಕಾರ್ಯತಂತ್ರಗಳನ್ನು ಬಜೆಟ್ ಒಳಗೊಂಡಿದೆ.
- ಸರ್ಕಾರವು ಪೂರ್ವ ಭಾಗವನ್ನು ಮತ್ತು ಅದರ ಜನರನ್ನು ಭಾರತದ ಬೆಳವಣಿಗೆಯ ಪ್ರಬಲ ಚಾಲಕರನ್ನಾಗಿ ಮಾಡಲು ಹೆಚ್ಚಿನ ಗಮನ ಹರಿಸಲಿದೆ.
- ತ್ವರಿತವಾಗಿ ಜನಸಂಖ್ಯೆಯ ಬೆಳವಣಿಗೆ ಮತ್ತು ಜನಸಂಖ್ಯಾ ಬದಲಾವಣೆಗಳಿಂದ ಉಂಟಾಗುವ ಸವಾಲುಗಳ ವ್ಯಾಪಕ ಪರಿಗಣನೆಗಾಗಿ ಸರ್ಕಾರವು ಉನ್ನತ–ಶಕ್ತಿಯ ಸಮಿತಿಯನ್ನು ರಚಿಸುತ್ತದೆ.
- ಮಧ್ಯಂತರ ಬಜೆಟ್‌ನಲ್ಲಿ ತೆರಿಗೆ ದರಗಳಲ್ಲಿ ಯಾವುದೇ ಬದಲಾವಣೆಯನ್ನು ಪ್ರಸ್ತಾಪಿಸಲಾಗಿಲ್ಲ.
- ಸುಮಾರು ಒಂದು ಕೋಟಿ ತೆರಿಗೆ ಪಾವತಿದಾರರು ಕೆಲವು ಸಣ್ಣಪುಟ್ಟ ಮತ್ತು ವಿವಾದಿತ ನೇರ ತೆರಿಗೆ ಬೇಡಿಕೆಯ ಹಿಂಪಡೆಯುವಿಕೆಯಿಂದ ಪ್ರಯೋಜನವನ್ನು ಪಡೆಯುವ ನಿರೀಕ್ಷೆಯಿದೆ.
- ಪ್ರಸ್ತುತ ಮತ್ತು ನಂತರ ಭಾರತೀಯ ಆರ್ಥಿಕತೆಯ ಬಗ್ಗೆ ಶ್ವೇತಪತ್ರ ಹೊರಡಿಸಲಿರುವ ಸರ್ಕಾರ.

.....19ನೇ ಪುಟದಿಂದ

ತಡೆಗಟ್ಟಲು ಪ್ರಸ್ತುತ ಇರುವ Security Operation Center ಉನ್ನತೀಕರಣ – ಕನ್ನಡ ಕಸ್ತೂರಿ ಎಂಬ ಯಂತ್ರಾನುವಾದ ತಂತ್ರಾಂಶದ ಅಭಿವೃದ್ಧಿಗೆ ಕ್ರಮ.

**ಸಾರಿಗೆ :** ಸಾರಿಗೆ ಇಲಾಖೆಯಲ್ಲಿ ನೋಂದಣಿಯಾಗಿರುವ ಎಲ್ಲಾ ವಾಹನಗಳ ದಾಖಲಾತಿಗಳ ಡಿಜಿಟಲೀಕರಣ, 2024–25ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ನಾಲ್ಕು ಕಛೇರಿಗಳಲ್ಲಿ ಜಾರಿ.

**ವಾಣಿಜ್ಯ ತೆರಿಗೆಗಳು :** ಪ್ರಸಕ್ತ ವರ್ಷದಲ್ಲಿ ಜಿ.ಎಸ್.ಟಿ ಮೇಲ್ಮನವಿ ನ್ಯಾಯಮಂಡಳಿಯ ಎರಡು ರಾಜ್ಯ ಪೀಠಗಳ ರಚನೆ – ಗ್ರಾಹಕ ಸಂವೇದಿ ಜಿ.ಎಸ್.ಟಿ ಡೇಟಾಬೇಸ್ ಮ್ಯಾನೇಜ್‌ಮೆಂಟ್ ಮತ್ತು ಕೃತಕ ಬುದ್ಧಿಮತ್ತೆ ಚಾಲಿತ ವಿಶ್ಲೇಷಣಾತ್ಮಕ ವ್ಯವಸ್ಥೆ ಅಭಿವೃದ್ಧಿಗೆ ಕ್ರಮ.

# "ಸ್ಫೂರ್ತಿಯ ಒಳಗೊಳ್ಳುವಿಕೆ - INSPIRE INCLUSION" ಸಮಸ್ತ ಎಲ್ಲ ಮಹಿಳೆಯರಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು

– ಶ್ರೀಮತಿ ಸವಿತ ಎನ್. ಇ. ಕ.ರಾ.ಸೌ.ಸಂ.ಸ. ನಿ., ಬೆಂಗಳೂರು

**ನಾಳೆ ಬರುವದು ನಮಗಿಂದೇ ಬರಲಿ, ಇಂದು ಬರುವದು ನಮಗೀಗಲೇ ಬರಲಿ !**
**ಆಗೀಗಲೆನ್ನದಿರೂ ಚೆನ್ನಮಲ್ಲಿಕಾರ್ಜುನ. ಎಂಬಂತೆ ಮಹಿಳೆ ಯಾವ ಕೆಲಸ–ಕಾರ್ಯಗಳಾಗಲಿ**
**ಸಮಸ್ಯೆಗಳೆ ಆಗಲಿ ಯಾವುದನ್ನು ಮುಂದೂಡದೆ ನಿರ್ವಹಿಸುವ ಜೀವವೆಂದರೆ ಮಹಿಳೆ.**

ವೇದಗಳ ಕಾಲದಲ್ಲಿದ್ದ ಗಾರ್ಗಿ, ಮೈತ್ರೇಯಿಯರ ಸಾಧನೆ ಸ್ಮರಣಿಯ. ಪುರಾಣ ಕಾಲದ 'ಆದಿಶಕ್ತಿ' ದುಷ್ಟಶಿಕ್ಷಕಿಯಾಗಿ, ಶಿಷ್ಟರಕ್ಷಕಿಯಾಗಿ, ಸರ್ವಶಕ್ತಿಯನ್ನು ಕಾಣಬಹುದಾಗಿದೆ. ಮಹಿಳೆಯನ್ನು ಹಲವು ಶಾಸ್ತ್ರಗಳಲ್ಲಿ ಈಕೆಯನ್ನು ಜಗಜನನಿಯೆಂದು ಹೇಳಲಾಗುತ್ತದೆ. ಹಾಗಾಗಿ ಹಿರಿಯರು – "ಕಾರ್ಯೇಷು ದಾಸಿ, ಸಲಹೇಷು ಮಂತ್ರಿ, ಭೋಜೇಷು ಮಾತ, ಶಯನೇಷು ರಂಭಾ ನಾರಿ ಕ್ಷಮಯಾಧರಿತ್ರಿ" ಎಂದಿದ್ದಾರೆ.

ಮಹಿಳೆಯನ್ನು ಕುರಿತು ಮನು ಹೀಗೆ ನುಡಿದಿದ್ದಾನೆ.–"ಮಾತ್ರಾಸ್ವಸ್ರಾ ಮಹಿತ್ರಾವಾದ ವಿವಿಕ್ತಸನೋ ಭವೇತ" ಬಲವಾನಿಂದ್ರಿಯ ಗ್ರಾಮೋವಿದ್ವಾಂಸಮಡಿಕರ್ಷತಿ" ಮನುವಿನ ದೃಷ್ಟಿಯಲ್ಲಿ ಮಹಿಳೆ ಶಿಕ್ಷಣವನ್ನು ಕಲಿಯುವುದು ಬೇಡವಾಗಿತ್ತು. ಗುಲಾಮಳಾಗಿಯೇ ಅವಳು ಸಮಾಜದಲ್ಲಿ ಮುಂದುವರಿಯಬೇಕಿತ್ತು. ಸ್ವಂತ ವಿಚಾರ ಮಾಡುವುದನ್ನು ಕಲಿಯುತ್ತಾಳೆ. ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡು ಸಬಲಳಾಗುತ್ತಾಳೆ. ಈ ಮಹಿಳಾ ಸಬಲೀಕರಣ ಮನುವಿಗೆ ಬೇಡವಾಗಿತ್ತು. ಹೆಣ್ಣು ಸ್ವಾತಂತ್ರಕ್ಕೆ ಅರ್ಹಳಲ್ಲ ಎಂಬ ಕಾಲದಿಂದಲೂ ಆಕೆ ಶಿಕ್ಷಣ. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳಿಂದ ವಂಚಿತಾಗಿದ್ದಳು. ಆದರೆ, ನಂತರ ತನ್ನ ನಿಲುವಿನಲ್ಲಿ ಮಹಿಳೆ ಕುರಿತು ಮನು ತನ್ನ ಮನುಸ್ಮೃತಿಯಲ್ಲಿ' ಯತ್ರನಾರ್ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ' ಎಂದಿದ್ದಾನೆ. ನಮ್ಮ ಪರಂಪರೆಯಲ್ಲಿಯೂ ಸಹ ಮುಖ್ಯ ದೇವತೆಗಳು 'ಸ್ತ್ರೀ' ದೇವತೆಗಳೇ. ಶಕ್ತಿಗೆ ಅದಿದೇವತೆ 'ಪಾರ್ವತಿ' ಧನಕ್ಕೆ ಅದಿದೇವತೆ 'ಲಕ್ಷ್ಮಿ' ಮತ್ತು ವಿದ್ಯೆಗೆ ಅದಿದೇವತೆ 'ಸರಸ್ವತಿ' . ನಮ್ಮ ದೇಶದಲ್ಲಿ ಹರಿಯುವ ಒಂದೇ ಒಂದು ನದಿಯನ್ನು ಹೊರತು ಎಲ್ಲಾ ನದಿಗಳೂ ' ಸ್ತ್ರೀ' ನದಿಗಳೇ. ಗಂಗಾ, ಕಾವೇರಿ, ಕೃಷ್ಣಾ, ನರ್ಮದಾ, ಅಲಕನಂದಾ, ಗೋದಾವರಿ, ತುಂಗಾ, ಭದ್ರಾ ಹೀಗೆ ಎಲ್ಲಾ ನದಿಗಳೂ 'ಸ್ತ್ರೀ'ಗಳೇ! ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ಅಭಿಪ್ರಾಯಕ್ಕೆ ಭಾರತೀಯ ಸಂಸ್ಕೃತಿ ಬದ್ಧವಾಗಿದೆ.

ಇಂದು ಮಹಿಳೆಯೊಬ್ಬಳು ದೇಶದ ರಾಷ್ಟ್ರಪತಿಯಾಗಿದ್ದಾರೆ ಎಂದರೆ ಅದಕ್ಕೆ ಸಂವಿಧಾನವೇ ಕಾರಣ. ಧಾರ್ಮಿಕ ನಂಬಿಕೆ ಏನೇ ಆಗಿರಲಿ, ಇಂದು ಮಹಿಳೆ ಪ್ರಗತಿ ಸಾಧಿಸಲು ಹಿಂದಿರುವುದು ಸಂವಿಧಾನವೇ ಹೊರತು ಬೇರಾವುದೂ ಅಲ್ಲ. ಅಂತರರಾಷ್ಟ್ರೀಯ ಮಹಿಳಾ ದಿನ (ಐಘಾಆ) ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಆಚರಿಸುವ ಜಾಗತಿಕ ದಿನವಾಗಿದೆ. ಈ ದಿನವು ಲಿಂಗ ಸಮಾನತೆಯನ್ನು ವೇಗಗೊಳಿಸಲು ಕ್ರಿಯೆಯ ಕರೆಯನ್ನು ಸೂಚಿಸುತ್ತದೆ. ಮಹಿಳೆಯರ ಸಾಧನೆಗಳನ್ನು ಆಚರಿಸಲು ಅಥವಾ ಮಹಿಳಾ ಸಮಾನತೆಗಾಗಿ ಗುಂಪುಗಳು ಒಟ್ಟಾಗಿ ಸೇರುವುದರಿಂದ ಮಹತ್ವದ ಚಟುವಟಿಕೆಯು ವಿಶ್ವಾದ್ಯಂತ ಸಾಕ್ಷಿಯಾಗಿದೆ. ಅಲ್ಲದೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮಾರ್ಚ್ 8 ರಂದು ಗುರುತಿಸಲಾಗಿದೆ, ಇದೊಂದು ವರ್ಷದ ಪ್ರಮುಖ ದಿನಗಳಲ್ಲಿ ಒಂದಾಗಿದೆ.

### ಮಹಿಳಾ ದಿನಾಚರಣೆ –2024 ಮಾರ್ಚ್ 08ರ ಥೀಮ್ :

ಮಹಿಳೆಯರ ಸೇರ್ಪಡೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಗೌರವಿಸಲು ನಾವು ಇತರರನ್ನು ಪ್ರೇರೇಪಿಸಿದಾಗ, ನಾವು ಉತ್ತಮ ಜಗತ್ತನ್ನು ರೂಪಿಸುತ್ತೇವೆ ಮತ್ತು ಮಹಿಳೆಯರು ತಮ್ಮನ್ನು ಒಳಗೊಳ್ಳಲು ಪ್ರೇರಿತರಾದಾಗ, ಸೇರಿದವರು, ಪ್ರಸ್ತುತತೆ ಮತ್ತು ಸಬಲೀಕರಣದ ಅರ್ಥವಿದೆ. #InspireInclusion# ಅಭಿಯಾನವು ಮಹಿಳೆಯರಿಗೆ ಹೆಚ್ಚು ಒಳಗೊಳ್ಳುವ ಜಗತ್ತನ್ನು ರೂಪಿಸುವ ಗುರಿಯನ್ನು ಹೊಂದಿದೆ.

### "ಸ್ಫೂರ್ತಿಯ ಒಳಗೊಳ್ಳುವಿಕೆ' ಅರ್ಥ (InspireInclusion)

ದೇಶ, ಗುಂಪು ಅಥವಾ ಸಂಸ್ಥೆ ನಿರ್ದಿಷ್ಟವಾಗಿಲ್ಲ. ಯಾವುದೇ ಸರ್ಕಾರ, ಎನ್‌ಜಿಒ, ದತ್ತಿ, ನಿಗಮ, ಶೈಕ್ಷಣಿಕ ಸಂಸ್ಥೆ, ಮಹಿಳಾ ನೆಟ್‌ವರ್ಕ್ ಅಥವಾ ಮಾಧ್ಯಮ ಕೇಂದ್ರವು ಐಡಬ್ಲ್ಯೂಡಿಗೆ ಸಂಪೂರ್ಣವಾಗಿ ಜವಾಬ್ದಾರರಾಗಿರುವುದಿಲ್ಲ. ದಿನವು ಎಲ್ಲಾ ಗುಂಪುಗಳಿಗೆ ಸಾಮೂಹಿಕವಾಗಿ, ಎಲ್ಲೆಡೆ ಸೇರಿದೆ. ಸ್ತ್ರೀವಾದದ ಸಾರಸಂಗ್ರಹಿ ಮತ್ತು ಅಂತರ್ಗತ ಸ್ವಭಾವ ಎಂದರೆ ಮಹಿಳಾ ಸಮಾನತೆಯನ್ನು ಮುನ್ನಡೆಸುವ ಎಲ್ಲಾ ಪ್ರಯತ್ನಗಳು ಸ್ವಾಗತಾರ್ಹ ಮತ್ತು ಮಾನ್ಯವಾಗಿರುತ್ತವೆ ಮತ್ತು ಗೌರವಿಸಬೇಕು. ಇದು ನಿಜವಾಗಿಯೂ 'ಒಳಗೊಳ್ಳುವಿಕೆ' ಎಂದರ್ಥ.

ವಿಶ್ವ–ಪ್ರಸಿದ್ಧ ಸ್ತ್ರೀವಾದಿ, ಪತ್ರಕರ್ತೆ ಮತ್ತು ಕಾರ್ಯಕರ್ತೆ ಗ್ಲೋರಿಯಾ ಸ್ಟೀನೆಮ್ ಒಮ್ಮೆ ವಿವರಿಸಿದ್ದಾರೆ "ಸಮಾನತೆಗಾಗಿ ಮಹಿಳಾ ಹೋರಾಟದ ಕಥೆಯು ಯಾವುದೇ ಸ್ತ್ರೀವಾದಿ ಅಥವಾ ಯಾವುದೇ ಒಂದು ಸಂಘಟನೆಗೆ ಸೇರಿಲ್ಲ, ಆದರೆ ಮಾನವ ಹಕ್ಕುಗಳ ಬಗ್ಗೆ ಕಾಳಜಿ ವಹಿಸುವ ಎಲ್ಲರ

ಸಾಮೂಹಿಕ ಪ್ರಯತ್ನಗಳಿಗೆ ಸೇರಿದೆ." ಆದ್ದರಿಂದ ಅಂತರಾಷ್ಟ್ರೀಯ ಮಹಿಳಾ ದಿನವನ್ನು ನಿಮ್ಮ ದಿನವನ್ನಾಗಿ ಮಾಡಿಕೊಳ್ಳಿ ಮತ್ತು ಮಹಿಳೆಯರಿಗೆ ನಿಜವಾಗಿಯೂ ಧನಾತ್ಮಕ ವ್ಯತ್ಯಾಸವನ್ನು ಮಾಡಲು ನಿಮ್ಮಿಂದ ಸಾಧ್ಯವಿರುವದನ್ನು ಮಾಡಿ. ಅಂತರಾಷ್ಟ್ರೀಯ ದಿನಾಚರಣೆಯನ್ನು 1911 ರಲ್ಲಿ ಪ್ರಾರಂಭಿಸಲಾಯಿತು ಮತ್ತು ಇದು ಎಲ್ಲೆಡೆ ಎಲ್ಲರಿಗೂ ಸೇರಿದ ದಿನದೊಂದಿಗೆ ಮಹಿಳಾ ಸಮಾನತೆಯನ್ನು ಹೆಚ್ಚಿಸಲು ಕೆಲಸ ಮಾಡುವ ಪ್ರಮುಖ ಕ್ಷಣವಾಗಿದೆ, ಅದರ ಎಲ್ಲಾ ರೂಪಗಳಲ್ಲಿ ಮಹಿಳಾ ಸಮಾನತೆಯ ಬಗ್ಗೆ. ಕೆಲವರಿಗೆ, ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುವ ಬಗ್ಗೆ. ಇತರರಿಗೆ, ಪ್ರಮುಖ ಬದ್ಧತೆಗಳನ್ನು ಬಲಪಡಿಸುತ್ತದೆ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯು ಜಾಗತಿಕ ಹಾಗೂ ಕ್ರಿಯಾಶೀಲತೆಯ ದಿನವಾಗಿದೆ. ಪ್ರಭಾವಕ್ಕೆ ಹೆಚ್ಚು ಗಣನೀಯ ಮತ್ತು ಗೋಚರ ಅವಕಾಶವನ್ನು ಒದಗಿಸುವ ದಿನವಾಗಬೇಕು

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸದುಪಯೋಗ**

ಅಂತರರಾಷ್ಟ್ರೀಯ ಮಹಿಳಾ ದಿನದ ವೆಬ್‌ಸೈಟ್‌ನ ಉದ್ದೇಶವು ಮಹಿಳೆಯರನ್ನು ಬೆಂಬಲಿಸುವುದು ಮತ್ತು ಮಹಿಳಾ ಸಮಾನತೆಯನ್ನು ಮುನ್ನಡೆಸುವಲ್ಲಿ ವಿಶ್ವಾದ್ಯಂತ ತೊಡಗಿಸಿಕೊಳ್ಳುವಿಕೆ ಮತ್ತು ಸಾಮೂಹಿಕ ಕ್ರಿಯೆಯನ್ನು ಉತ್ತೇಜಿಸುವುದು. ವಿಶ್ವಾದ್ಯಂತ ಮಹಿಳೆಯರಿಗೆ ಧನಾತ್ಮಕ ಬದಲಾವಣೆಯನ್ನು ರೂಪಿಸಲು ಸಹಾಯ ಮಾಡುತ್ತದೆ. ಮಹಿಳಾ ಸಮಾನತೆಯನ್ನು ರೂಪಿಸಲು ಎಲ್ಲೆಡೆ ಎಲ್ಲರೂ ಸಹಾಯ ಮಾಡಬಹುದು. ಮಹಿಳಾ ಸಮಾನತೆಯ ವಿಷಯಗಳನ್ನು ರೂಪಿಸಲು ಸಾಮೂಹಿಕ ಕ್ರಮ ಮತ್ತು ಸಹಕಾರಿ ಬೆಂಬಲ, ಮತ್ತು ಎಲ್ಲಾ ಗುಂಪುಗಳು ಅವರು ಆಯ್ಕೆಮಾಡುವ ಯಾವುದೇ ಸೂಕ್ತ ವಿಧಾನದಿಂದ ಮಹಿಳಾ ಸಮಾನತೆಯನ್ನು ಮುನ್ನಡೆಸಲು ಸ್ವಾಗತಿಸಬೇಕು. ಈ ಆಚರಣೆಯಿಂದ ಮಹಿಳೆಯರ ಸಾಧನೆಗಳನ್ನು ಗುರುತಿಸುವುದು, ಆಚರಿಸುವುದು ಮತ್ತು ಗೋಚರತೆಯನ್ನು ಹೆಚ್ಚಿಸುವುದು ಸಮಾನತೆಯನ್ನು ರೂಪಿಸಲು ಸಹಾಯ ಮಾಡುತ್ತದೆ. ಮಹಿಳೆಯ ನಂಬಿಕೆ ಮತ್ತು ಮೆಚ್ಚುಗೆಯ ಅಡಿಪಾಯದ ಆಧಾರದ ಮೇಲೆ ಕಾರ್ಯತಂತ್ರದ ಸಹಯೋಗಗಳು ಮಹಿಳೆಯರಿಗೆ ಧನಾತ್ಮಕ ಬದಲಾವಣೆಯ ಮೇಲೆ ಪರಿಣಾಮ ಬೀರಬಹುದು.

ಅರ್ಥಪೂರ್ಣ ನಿರೂಪಣೆಗಳು, ಸಂಪನ್ಮೂಲಗಳು ಮತ್ತು ಚಟುವಟಿಕೆಯ ಮೂಲಕ ವಿಶ್ವಾದ್ಯಂತ ಜಾಗೃತಿ ಮೂಡಿಸುವುದು ಲಿಂಗ ಸಮಾನತೆಯನ್ನು ವೇಗಗೊಳಿಸಲು ಲಿಂಗ ಪಕ್ಷಪಾತ ಮತ್ತು ತಾರತಮ್ಯವನ್ನು ಎದುರಿಸಲು ಸಹಾಯ ಮಾಡುತ್ತದೆ. ನೇರಳೆ ಅಂತರಾಷ್ಟ್ರೀಯ ಮಹಿಳಾ ದಿನದ ಅಧಿಕೃತ ಬಣ್ಣವಾಗಿದೆ. ಅದನ್ನು ಧರಿಸುವುದು ಒಗ್ಗಟ್ಟು ಮತ್ತು ಬೆಂಬಲವನ್ನು ತೋರಿಸುತ್ತದೆ.

2024 ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಭಿಯಾನದ ಥೀಮ್: "ಇನ್‌ಸ್ಪೈರ್ ಇನ್‌ಕ್ಲೂಷನ್"#Inspire Inclusion

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ 2024 ಮತ್ತು ಅದರಾಚೆಗೆ, ಸೇರ್ಪಡೆಯನ್ನು ಪ್ರೇರೇಪಿಸೋಣ ಅಥವಾ ಸ್ಫೂರ್ತಿಯ ಸೇರ್ಪಡೆ/ ಒಳಗೊಳ್ಳುವಿಕೆ.

ಮಹಿಳೆಯರ ಸೇರ್ಪಡೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಗೌರವಿಸಲು ನಾವು ಇತರರನ್ನು ಪ್ರೇರೇಪಿಸಿದಾಗ, ನಾವು ಉತ್ತಮ ಜಗತ್ತನ್ನು ರೂಪಿಸುತ್ತೇವೆ ಮತ್ತು ಮಹಿಳೆಯರು ತಮ್ಮನ್ನು ಒಳಗೊಳ್ಳಲು ಪ್ರೇರಿತರಾದಾಗ, ಸೇರಿದವರು, ಪ್ರಸ್ತುತತೆ ಮತ್ತು ಸಬಲೀಕರಣದ ಅರ್ಥವಿದೆ. #ಇನ್‌ಸ್ಪೈರ್ ಇನ್‌ಕ್ಲೂಷನ್ ಅಭಿಯಾನದ ಗುರಿಯು ಮಹಿಳೆಯರಿಗಾಗಿ ಹೆಚ್ಚು ಒಳಗೊಳ್ಳುವ ಜಗತ್ತನ್ನು ಒಟ್ಟಾಗಿ ರೂಪಿಸುವುದು. ಒಂದು ಶತಮಾನದ ಇತಿಹಾಸ ಮತ್ತು ಬದಲಾವಣೆಯೊಂದಿಗೆ, ಮೊದಲ ಅಂತರರಾಷ್ಟ್ರೀಯ ಮಹಿಳಾ ದಿನವನ್ನು (IWD) ಮಾರ್ಚ್ 1911 ರಲ್ಲಿ ನಡೆಸಲಾಯಿತು. ಐಡಬ್ಲ್ಯುಡಿ ನಿರ್ದಿಷ್ಟ ದೇಶ, ಗುಂಪು ಅಥವಾ ಸಂಘಟನೆಯಲ್ಲ. ಇದು ಸಾಮೂಹಿಕ ಜಾಗತಿಕ ಕ್ರಿಯಾಶೀಲತೆ ಮತ್ತು ಆಚರಣೆಯ ದಿನವಾಗಿದೆ, ಇದು ಮಹಿಳಾ ಸಮಾನತೆಯನ್ನು ರೂಪಿಸಲು ಬದ್ಧವಾಗಿರುವ ಎಲ್ಲರಿಗೂ ಸೇರಿದೆ. ವಿಶ್ವ-ಪ್ರಸಿದ್ಧ ಸ್ತ್ರೀವಾದಿ, ಪತ್ರಕರ್ತೆ ಮತ್ತು ಕಾರ್ಯಕರ್ತೆ, ಗ್ಲೋರಿಯಾ ಸ್ಟೀನೆಮ್ ಒಮ್ಮೆ ವಿವರಿಸಿದ್ದಾರೆ: "ಸಮಾನತೆಗಾಗಿ ಮಹಿಳೆಯರ ಹೋರಾಟದ ಕಥೆಯು ಯಾವುದೇ ಸ್ತ್ರೀವಾದಿ ಅಥವಾ ಯಾವುದೇ ಒಂದು ಸಂಘಟನೆಗೆ ಸೇರಿಲ್ಲ ಆದರೆ ಮಾನವ ಹಕ್ಕುಗಳ ಬಗ್ಗೆ ಕಾಳಜಿವಹಿಸುವ ಎಲ್ಲರ ಸಾಮೂಹಿಕ ಪ್ರಯತ್ನಗಳಿಗೆ ಸೇರಿದೆ."

ಮಹಿಳಾ ದಿನಾಚರಣೆಯ ದಿನವನ್ನು ನಿಮ್ಮ ದಿನವನ್ನಾಗಿಸಿ, ಮಹಿಳೆಯರನ್ನು ಬೆಂಬಲಿಸಲು ಮತ್ತು ಮುನ್ನಡೆಸಲು ನಿಮ್ಮಿಂದ ಸಾಧ್ಯವಿರುವದನ್ನು ಮಾಡಿ. ಸೇರ್ಪಡೆಯನ್ನು ಪ್ರೇರೇಪಿಸಲು ಬದ್ಧವಾಗಿದೆ ಎಲ್ಲಾ ಕಡೆಯು ಎಲ್ಲರೂ ಸೇರ್ಪಡೆಗೆ ಪ್ರೇರಣೆ ನೀಡಬಹುದು. ವಿಶ್ವಾದ್ಯಂತ ಸಂಸ್ಥೆಗಳು, ಗುಂಪುಗಳು ಮತ್ತು ವ್ಯಕ್ತಿಗಳು ಎಲ್ಲರೂ ಒಂದು ಪಾತ್ರವನ್ನು ವಹಿಸಬಹುದು – ಸಮುದಾಯದಲ್ಲಿ, ಕೆಲಸದಲ್ಲಿ, ಮನೆಯಲ್ಲಿ ಮತ್ತು ಅದರಾಚೆ ಕೂಡ ಒಳಗೊಳ್ಳಲು ಪ್ರೇರೇಪಿಸಬೇಕು.

ಮಹಿಳೆಯರನ್ನು ನಿಜವಾಗಿಯೂ ಒಳಗೊಳ್ಳುವುದು ಎಂದರೆ ಅವರ ಜನಾಂಗ, ವಯಸ್ಸು, ಸಾಮರ್ಥ್ಯ, ನಂಬಿಕೆ, ದೇಹದ ಚಿತ್ರಣ ಮತ್ತು ಅವರು ಹೇಗೆ ಗುರುತಿಸುತ್ತಾರೆ ಎಂಬುದರ ವೈವಿಧ್ಯತೆಯನ್ನು ಬಹಿರಂಗವಾಗಿ ಅಳವಡಿಸಿಕೊಳ್ಳುವುದು. ವಿಶ್ವಾದ್ಯಂತ, ಮಹಿಳೆಯರು ಎಲ್ಲಾ ಪ್ರಯತ್ನದ ಕ್ಷೇತ್ರಗಳಲ್ಲಿ ಸೇರಿಸಿಕೊಳ್ಳಬೇಕು. ವೈಯಕ್ತಿಕ ಆಧಾರದ ಮೇಲೆ, ಮಹಿಳೆಯರು ಮತ್ತು ಹುಡುಗಿಯರ ಸೇರ್ಪಡೆಯನ್ನು ಅರ್ಥಮಾಡಿಕೊಳ್ಳುವುದು, ಮೌಲ್ಯೀಕರಿಸುವುದು ಮತ್ತು ಹುಡುಕುವುದು ಮುಖ್ಯವಾಗಿದೆ. ಹೆಚ್ಚುವರಿಯಾಗಿ, ಈ ಜ್ಞಾನ, ಬೆಂಬಲ ಮತ್ತು ಪ್ರೋತ್ಸಾಹವನ್ನು ಇತರರೊಂದಿಗೆ ಹಂಚಿಕೊಳ್ಳುವುದು ಮುಖ್ಯವಾಗಿದೆ. ಸಾಂಸ್ಥಿಕ ಅಥವಾ ಗುಂಪಿನ ಆಧಾರದ ಮೇಲೆ, ಮಹಿಳೆಯರು ಮತ್ತು ಹುಡುಗಿಯರ ಅಗತ್ಯತೆಗಳು, ಆಸಕ್ತಿಗಳು ಮತ್ತು ಆಕಾಂಕ್ಷೆಗಳನ್ನು ಮೌಲ್ಯೀಕರಿಸಲಾಗಿದೆ ಮತ್ತು ಸೇರಿಸುವುದನ್ನು ಖಚಿತಪಡಿಸಿಕೊಳ್ಳಲು ಹಲವು ಮಾರ್ಗಗಳಿವೆ.

25ನೇ ಪುಟಕ್ಕೆ.....

# ಗ್ರಾಹಕರ ಹಕ್ಕುಗಳು, ಕರ್ತವ್ಯ ಹಾಗೂ ಜವಾಬ್ದಾರಿ

– ಶ್ರೀಮತಿ ಕವಿತಾ ಆರ್, ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.




ಅಂತರರಾಷ್ಟ್ರೀಯ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯನ್ನು ಮಾರ್ಚ್ 15ರಂದು ಆಚರಿಸಲಾಗುತ್ತದೆ. ಆ ಮೂಲಕ ಗ್ರಾಹಕ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತದೆ. ಗ್ರಾಹಕರು ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳುವುದರಿಂದ ಮಾರುಕಟ್ಟೆ ಅಥವಾ ಖರೀದಿ ಸ್ಥಳದಲ್ಲಿ ಉಂಟಾಗುವ ಅನ್ಯಾಯಗಳ ಹೋರಾಟ ನಡೆಸಬಹುದು.

ಈ ದಿನದಂದು ಗ್ರಾಹಕರ ಹಕ್ಕುಗಳ ಬಗ್ಗೆ, ಅವನ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಒಂದು ಚಿಂತನೆ ಹಾಗೂ ವಿಮರ್ಶೆಯ ಅಗತ್ಯತೆಯನ್ನು ಈ ಲೇಖನ ಪ್ರಚುರ ಪಡಿಸುತ್ತದೆ.

"Customer is the King" ಎಂಬುದು ಒಂದು ಹೇಳಿಕೆ. ಅಂದರೆ, ಗ್ರಾಹಕ ಅವಶ್ಯಕತೆಗಳನುಗಣವಾಗಿಯೇ ವಸ್ತುಗಳ ಉತ್ಪಾದನೆ ಹಾಗು ಮಾರಾಟವನ್ನು ಉತ್ಪಾದನಾ ಸಂಸ್ಥೆಗಳು ಮಾಡಬೇಕಾಗುತ್ತದೆ.

**ಗ್ರಾಹಕ ಹಕ್ಕುಗಳ ದಿನದ ಇತಿಹಾಸ :** ವಿಶ್ವ ಗ್ರಾಹಕ ಹಕ್ಕುಗಳ ದಿನವನ್ನು 1983 ರಲ್ಲಿ ಮೊದಲ ಬಾರಿಗೆ ಆಚರಣೆ ಮಾಡಲಾಯಿತು. ಅಂದಿನಿಂದ ಇದನ್ನು ಪ್ರತಿವರ್ಷ ಮಾರ್ಚ್ 15ರಂದು ಜಾಗತಿಕವಾಗಿ ಆಚರಿಸಲಾಗುತ್ತದೆ. ಮಾರ್ಚ್ 15, 1962 ರಂದು ಆಗಿನ ಯುಎಸ್ ಅಧ್ಯಕ್ಷ ಜಾನ್ ಎಫ್. ಕೆನಡಿ ಯುಎಸ್ ವಿಶೇಷ ಸಂದೇಶವನ್ನು ನೀಡುವುದರ ಮೂಲಕ ಗ್ರಾಹಕರ ಹಕ್ಕುಗಳ ಸಮಸ್ಯೆಯ ವಿಚಾರದ ಬಗ್ಗೆ ಚರ್ಚೆ ನಡೆಸಿದರು. ಈ ಮೂಲಕ ಗ್ರಾಹಕರ ಹಕ್ಕುಗಳ ವಿಷಯದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದ ಮೊದಲ ವಿಶ್ವ ನಾಯಕ ಎನಿಸಿಕೊಂಡರು.

**ವಿಶ್ವ ಗ್ರಾಹಕ ದಿನಾಚರಣೆಯ ಉದ್ದೇಶ :** ಗ್ರಾಹಕರ ಹಕ್ಕುಗಳು ಮತ್ತು ಅಗತ್ಯತೆಗಳ ಬಗ್ಗೆ ಜಾಗತಿಕ ಜಾಗೃತಿ ಮೂಡಿಸಲು, ಗ್ರಾಹಕರ ಹಕ್ಕುಗಳನ್ನು ರಕ್ಷಿಸಲು, ಮಾರುಕಟ್ಟೆಯಲ್ಲಿ ದುರುಪಯೋಗದ ಬಗ್ಗೆ ಅರಿವು ಮೂಡಿಸಲು ಜಾಗತಿಕವಾಗಿ ಮಾರ್ಚ್ 15 ರಂದು ವಿಶ್ವ ಗ್ರಾಹಕ ಹಕ್ಕುಗಳ ದಿನವನ್ನು (World Consumer Rights Day) ಆಚರಿಸಲಾಗುತ್ತದೆ. ಹಣ ಕೊಟ್ಟು ವಸ್ತು ಅಥವಾ ಸೇವೆ ಕೊಂಡುಕೊಳ್ಳುವವರೆಲ್ಲರೂ ಗ್ರಾಹಕರೇ. ಆದರೆ ಹೆಚ್ಚಿನ ಗ್ರಾಹಕರಿಗೆ ತಮಗೆ ಹಕ್ಕುಗಳಿವೆ. ಎಂಬುದೇ ಗೊತ್ತಿರುವುದಿಲ್ಲ. ಇದನ್ನು ಎಲ್ಲರಿಗೂ ತಿಳಿಸುವುದು, ತಮ್ಮ ಹಕ್ಕುಗಳನ್ನು ನ್ಯಾಯೋಚಿತವಾಗಿ ಪಡೆಯುವಂತೆ ಮಾಡುವುದೇ ಗ್ರಾಹಕರ ಹಕ್ಕುಗಳ ದಿನದ ಉದ್ದೇಶವಾಗಿದೆ.

**ಗ್ರಾಹಕರು ಎಂದರೆ :** ತನ್ನ ಸ್ವಂತ ಬಳಕೆಗಾಗಿ ಸರಕು ಅಥವಾ ಸೇವೆಯನ್ನು ಖರೀದಿಸುವ ವ್ಯಕ್ತಿಯನ್ನು ಗ್ರಾಹಕ ಎಂದು ಕರೆಯಲಾಗುತ್ತದೆ. ಗ್ರಾಹಕರು ಅಂದರೆ ನಾವೆಲ್ಲರೂ... ನಾವು ನಮ್ಮ ಗ್ರಾಹಕ ಹಕ್ಕುಗಳ ಬಗ್ಗೆ ತಿಳಿದಿರುವುದು ಬಹಳ ಮುಖ್ಯವಾಗುತ್ತದೆ. ಮಾರುಕಟ್ಟೆಯು ಕೆಲವು ನೈತಿಕತೆಗಳು ಹಾಗೂ ಮೌಲ್ಯಗಳ ಮೇಲೆ ನಡೆಯಬೇಕು. ಕೆಲವೊಮ್ಮೆ ಗ್ರಾಹಕರ ಹಕ್ಕುಗಳ ತಿಳಿದಿರದೇ ಇರುವುದು ಕೂಡ ನಮಗೆ ಒಳಿತಲ್ಲ. ಇದನ್ನು ಜನ ದುರುಪಯೋಗ ಪಡಿಸಿಕೊಳ್ಳಬಹುದು. ಹಕ್ಕುಗಳ ಬಗ್ಗೆ ತಿಳಿದುಕೊಳ್ಳುವುದು ಗ್ರಾಹಕರಾಗಿ ನಮ್ಮ ಪ್ರಯೋಜನಗಳನ್ನು ಗರಿಷ್ಠಗೊಳಿಸಲು ಮಾರುಕಟ್ಟೆಯಲ್ಲಿ ಸರಕು ಮತ್ತು ಸೇವೆಗಳ ನೈತಿಕ ಹರಿವನ್ನು ಸಕ್ರಿಯಗೊಳಿಸಲು ನಮಗೆ ಸಹಾಯ ಮಾಡುತ್ತದೆ. ಸರ್ಕಾರವು ಗ್ರಾಹಕರ ಹಕ್ಕುಗಳು ಮತ್ತು ಆ ಹಕ್ಕುಗಳ ರಕ್ಷಣೆಗೆ ಒತ್ತು ನೀಡುತ್ತಲೇ ಇರುತ್ತದೆ ಮತ್ತು ನಾಗರಿಕರನ್ನು ಒಳಗೊಳ್ಳಲು ಮತ್ತು ಅವರಿಗೆ ಅರಿವು ಮೂಡಿಸಲು ಪ್ರಯತ್ನಿಸುತ್ತದೆ. ಗ್ರಾಹಕರು ಅಂದರೆ ನಾವು ಈ ಹಕ್ಕುಗಳ ಬಗ್ಗೆ ಶಿಕ್ಷಣ ಪಡೆಯುವುದು ಮತ್ತು ಅವುಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಭ್ಯಾಸ ಮಾಡುವುದು ಮುಖ್ಯವಾಗುತ್ತದೆ.

**ಗ್ರಾಹಕರ ಹಕ್ಕುಗಳು : ಗ್ರಾಹಕ ಸಂರಕ್ಷಣಾ ಕಾಯಿದೆ, 1986 ರ ಪ್ರಕಾರ ಈ ಕೆಳಕಂಡಂತೆ ಗ್ರಾಹಕ ಹಕ್ಕುಗಳಿವೆ.**

1. **ಸುರಕ್ಷತೆಯ ಹಕ್ಕು :** ಗ್ರಾಹಕರ ಆರೋಗ್ಯ ಹಾಗೂ ಜೀವಕ್ಕೆ ಹಾನಿಯುಂಟು ಮಾಡುವ ಮತ್ತು ಇತರೆ ನ್ಯೂನತೆಗಳನ್ನು ಹೊಂದಿರುವ ಆಹಾರ ವಸ್ತು, ಔಷಧ, ವಿದ್ಯುತ್ ಉಪಕರಣಗಳು, ಗ್ಯಾಸ್ ಸಿಲಿಂಡರ್, ಇತ್ಯಾದಿಗಳಿಂದ ರಕ್ಷಣೆ ಪಡೆಯುವ ಹಕ್ಕಾಗಿದೆ.
2. **ಮಾಹಿತಿ ಪಡೆಯುವ ಹಕ್ಕು :** ಗ್ರಾಹಕರು ತಾವು ಖರೀದಿಸಲು ಇಚ್ಛಿಸುವ ಸರಕುಗಳ ಪ್ರಮಾಣ, ಗುಣಮಟ್ಟ, ಬೆಲೆ, ಉತ್ಪಾದನೆ ಹಾಗೂ ಕಾಯ್ದೆ ದಿನಾಂಕ ಮುಂತಾದವುಗಳ ಬಗ್ಗೆ ನೈಜ ಹಾಗೂ ಸಂಪೂರ್ಣ ಮಾಹಿತಿ ಪಡೆಯಬಹುದು.
3. **ಆಯ್ಕೆಯ ಹಕ್ಕು :** ಮಾರಾಟಗಾರ ನಿರ್ದಿಷ್ಟ ವಸ್ತುಗಳನ್ನು ಖರೀದಿಸುವಂತೆ ಒತ್ತಾಯಿಸಿದರೂ ವೈವಿಧ್ಯಮಯ ಸರಕುಗಳಲ್ಲಿ ತಮ್ಮ ಅಗತ್ಯಕ್ಕನುಗುಣವಾಗಿ ಸರಕು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಗ್ರಾಹಕರು ಹೊಂದಿರುತ್ತಾರೆ.
4. **ದೂರು ನೀಡುವ ಹಕ್ಕು :** ಗ್ರಾಹಕರು ಶೋಷಣೆಗೆ ಒಳಗಾಗಿದ್ದಲ್ಲಿ

ಅಥವಾ ಖರೀದಿಸಿದ ಸರಕು ಅಥವಾ ಸೇವೆಗಳಿಂದ ಅತೃಪ್ತಿ ಹೊಂದಿದ್ದಲ್ಲಿ ಸಂಬಂದಿಸಿದ ಗ್ರಾಹಕ ನ್ಯಾಯಾಲಯಕ್ಕೆ ದೂರು ಸಲ್ಲಿಸುವ ಹಕ್ಕನ್ನು ಹೊಂದಿರುತ್ತಾರೆ.

5. **ಪರಿಹಾರ ಪಡೆಯುವ ಹಕ್ಕು :** ಗ್ರಾಹಕರು ತಾವು ಖರೀದಿಸಿದ ವಸ್ತು ಅಥವಾ ಸೇವೆಯಲ್ಲಿ ದೋಷಗಳಿದ್ದಲ್ಲಿ ಅವುಗಳಿಗೆ ಪರಿಹಾರವಾಗಿ ಬದಲಿ ವಸ್ತು ಅಥವಾ ದೋಷರಹಿತ ಸೇವೆ ಪಡೆಯುವ, ನಷ್ಟ ಭರಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ.

6. **ಗ್ರಾಹಕರ ಶಿಕ್ಷಣದ ಹಕ್ಕು :** ಗ್ರಾಹಕರು ಸರಕು ಮತ್ತು ಸೇವೆಗಳನ್ನು ಉಪಯೋಗಿಸುವ ಸಂದರ್ಭಗಳಲ್ಲಿ ಸಂಪೂರ್ಣ ಜ್ಞಾನ ಹಾಗೂ ಪರಿಣಿತಿಯನ್ನು ಪಡೆಯುವ, ಹಾಗೆ ತಮ್ಮ ಹಕ್ಕುಗಳ ಬಗ್ಗೆ ಕಾನೂನು ಮಾಹಿತಿ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

**ಗ್ರಾಹಕ ಸಂರಕ್ಷಣಾ ಕಾಯ್ದೆಯ ಪ್ರಕಾರ ಗ್ರಾಹಕರ ಸಂರಕ್ಷಣೆಗೆ 3 ವೇದಿಕೆಗಳಿವೆ :**

1. **ಜಿಲ್ಲಾ ವೇದಿಕೆ :** ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ವೇದಿಕೆ ಇರುತ್ತದೆ. ಜಿಲ್ಲಾ ವೇದಿಕೆಯ ನ್ಯಾಯ ಪೀಠಕ್ಕೆ ರಾಜ್ಯ ಸರ್ಕಾರದಿಂದ ನಾಮಾಂಕಿತಗೊಂಡ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿಯು ಅಧ್ಯಕ್ಷರಾಗಿರುತ್ತಾರೆ. ಈ ವೇದಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ.

2. **ರಾಜ್ಯ ಆಯೋಗ :** ಈ ಆಯೋಗಕ್ಕೆ ರಾಜ್ಯದ ಉಚ್ಚನ್ಯಾಯಾಲಯದ ನಿವೃತ್ತಿ ನ್ಯಾಯಾಧೀಶರಾಗಲಿ ಅಥವಾ ಹಾಲಿ ನ್ಯಾಯಾಧೀಶರಾಗಲಿ ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಸಾಮರ್ಥ್ಯವನ್ನು ಹೊಂದಿರುವ ಇಬ್ಬರು ಸದಸ್ಯರಿರುತ್ತಾರೆ. ಅವರಲ್ಲಿ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ. ಈ ಆಯೋಗವು 20 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿವರೆಗಿನ ಮೌಲ್ಯದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತದೆ.

3. **ರಾಷ್ಟ್ರೀಯ ಆಯೋಗ :** ಈ ಆಯೋಗವು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಿಂದ ಕೂಡಿರುತ್ತದೆ. ಇಲ್ಲಿ ಇತರೆ 4 ಸದಸ್ಯರಿರುತ್ತಾರೆ. ಇವರು ಸಾರ್ವಜನಿಕ ವ್ಯವಹಾರ ಅಥವಾ ಆಡಳಿತದಲ್ಲಿ ನುರಿತವರಾಗಿರಬೇಕು. ಇವರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ಈ ಆಯೋಗವು ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ಇತ್ಯರ್ಥ ಮಾಡುತ್ತದೆ.

**ಗ್ರಾಹಕರ ಜವಾಬ್ದಾರಿಗಳು :** ಹಕ್ಕುಗಳ ಬಗ್ಗೆ ಜಾಗೃತಿ, ಗುಣಮಟ್ಟದ ಅರಿವು, ದೂರು ನೀಡಲು ಸಿದ್ಧರಿರಬೇಕು, ತಪ್ಪು ಜಾಹೀರಾತುಗಳಿಂದ ದಿಕ್ಕು ತಪ್ಪಬಾರದು, ನಗದು ರಶೀದಿಗಾಗಿ ಬೇಡಿಕೆ, ಜಾಗೃತ ಬಳಕೆದಾರ ಸರಕುಗಳ ಆಯ್ಕೆ, ಗ್ರಾಹಕ ಸಂಘಟನೆ, ಪರಿಸರ ರಕ್ಷಣೆ, ಅವಸರದಲ್ಲಿ ಖರೀದಿಸಬಾರದು, ಇತ್ಯಾದಿ ಹಲವು ಜವಾಬ್ದಾರಿಗಳನ್ನು ಗ್ರಾಹಕರು ಹೊಂದಿರುತ್ತಾರೆ.

**ಗ್ರಾಹಕರ ಜವಾಬ್ದಾರಿಗಳು :** ಗ್ರಾಹಕರು ತಾವು ಪಡೆಯುತ್ತಿರುವ ಹಕ್ಕುಗಳೊಂದಿಗೆ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಹಕ್ಕುಗಳು ಮತ್ತು ಜವಾಬ್ದಾರಿಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ.

1. **ಹಕ್ಕುಗಳ ಬಗ್ಗೆ ಜಾಗೃತಿ :** ಗ್ರಾಹಕರು ಸರಕು ಮತ್ತು ಸೇವೆಗಳನ್ನು ಖರೀದಿಸುವ ಸಂದರ್ಭದಲ್ಲಿ ತಮಗೆ ದೊರೆಯುವ ಹಕ್ಕುಗಳಾದ ಸುರಕ್ಷತೆ, ಮಾಹಿತಿ ಪಡೆಯುವ ಹಾಗೂ ಇತರೆ ಹಕ್ಕುಗಳ ಬಗ್ಗೆ ಸಂಪೂರ್ಣ ಜಾಗೃತಿಯನ್ನು ಹೊಂದಿರಬೇಕು.

2. **ಗುಣಮಟ್ಟದ ಅರಿವು :** ಗ್ರಾಹಕರು ತಾವು ಸರಕುಗಳನ್ನು ಖರೀದಿಸುವ ಸಂದರ್ಭದಲ್ಲಿ ಗುಣಮಟ್ಟ ನಿರ್ಧರಿಸಿದ ಬಿ.ಐ.ಎಸ್, ಅಗ್–ಮಾರ್ಕ್, ಹಾಲ್–ಮಾರ್ಕ್, ಇತ್ಯಾದಿಗಳ ಬಗ್ಗೆ ಅರಿವನ್ನು ಹೊಂದಿರಬೇಕು.

3. **ದೂರು ನೀಡಲು ಸಿದ್ಧರಿರಬೇಕು :** ಗ್ರಾಹಕರು ತಾವು ಖರೀದಿಸಿದ ಸರಕು ಅಥವಾ ಸೇವೆಗಳಲ್ಲಿ ನ್ಯೂನತೆಗಳಿದ್ದಲ್ಲಿ ಅದರ ಮೌಲ್ಯವನ್ನು ಪರಿಗಣಿಸದೇ ಸಂಬಂಧಿಸಿದ ಗ್ರಾಹಕ ನ್ಯಾಯಾಲಯದಲ್ಲಿ ದೂರನ್ನು ಸಲ್ಲಿಸಬೇಕಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ.

4. **ತಪ್ಪು ಜಾಹೀರಾತುಗಳಿಂದ ದಿಕ್ಕು ತಪ್ಪಬಾರದು :** ಸಾಮಾನ್ಯವಾಗಿ ಉತ್ಪಾದಕ/ಮಾರಾಟಗಾರ ಜಾಹೀರಾತಿನಲ್ಲಿ ತಪ್ಪು ಮಾಹಿತಿಗಳನ್ನು ನೀಡುವುದರ ಮೂಲಕ ಸರಕುಗಳ ಗುಣಮಟ್ಟವನ್ನು ವಾಸ್ತವಕ್ಕಿಂತ ಹೆಚ್ಚಾಗಿದೆಯೆಂದು ಬಿಂಬಿಸುತ್ತಾನೆ. ಆದರೆ, ಗ್ರಾಹಕರು ನೈಜ ಗುಣವನ್ನು ಪರಿಶೀಲಿಸಿ, ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ತಪ್ಪು ಮಾಹಿತಿಯ ಜಾಹಿರಾತಿನಿಂದ ರಕ್ಷಣೆಯನ್ನು ಪಡೆಯುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

5. **ನಗದು ರಶೀದಿಗಾಗಿ ಬೇಡಿಕೆ :** ಗ್ರಾಹಕರು ತಾವು ಖರೀದಿಸಿದ ಸರಕು ಮತ್ತು ಸೇವೆಗಳ ಪುರಾವೆಗಾಗಿ ನಗದು ರಶೀದಿಯನ್ನು ಕೇಳಿ ಪಡೆಯಬೇಕಾದ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಖರೀದಿದಾರ ನಗದು ರಶೀದಿಯನ್ನು ಅಪೇಕ್ಷಿಸದೇ ಇದ್ದರೂ ಅದನ್ನು ನೀಡುವುದು ಮಾರಾಟಗಾರನ ಆದ್ಯ ಕರ್ತವ್ಯವಾಗಿರುತ್ತದೆ.

6. **ಜಾಗೃತ ಬಳಕೆದಾರ :** ಗ್ರಾಹಕರು ತಾವು ಸರಕು ಮತ್ತು ಸೇವೆಗಳನ್ನು ಖರೀದಿಸುವ ಸಂದರ್ಭದಲ್ಲಿ ಅದರ ಸ್ವಭಾವ, ಬೆಲೆ, ತಯಾರಿಕೆಯ ಮತ್ತು ವಾಯಿದೆಯ ದಿನಾಂಕ, ಸರಕುಗಳನ್ನು ಉಪಯೋಗಿಸುವ ಬಗ್ಗೆ ನಿರ್ದೇಶನ ಮತ್ತು ಸರಕುಗಳನ್ನು ಉಪಯೋಗಿಸುವಾಗ ತೆಗೆದುಕೊಳ್ಳಬೇಕಾದ ಮುಂಜಾಗ್ರತೆಯ ಬಗ್ಗೆ

ಜಾಗರೂಕರಾಗಿರಬೇಕಾಗುತ್ತದೆ.

7. **ಸರಕುಗಳ ಆಯ್ಕೆ :** ಗ್ರಾಹಕರು ಕಾನೂನುಬದ್ಧ ಸರಕು ಮತ್ತು ಸೇವೆಗಳನ್ನು ಖರೀದಿಸಬೇಕು. ಕಳ್ಳಸಾಗಾಣಿಕೆ, ಕಾಳಸಂತೆಯ ಸರಕುಗಳನ್ನು ಖರೀದಿಸಬಾರದು.

8. **ಗ್ರಾಹಕ ಸಂಘಟನೆ :** ಗ್ರಾಹಕರು ಉತ್ಪಾದಕ/ಮಾರಾಟಗಾರರ ಅನೈತಿಕ ವ್ಯಾಪಾರಿ ಪದ್ಧತಿಗಳಿಂದ ರಕ್ಷಣೆ ಪಡೆಯಲು ತಮ್ಮದೇ ಆದ ಗ್ರಾಹಕ ಸಂಘಟನೆಗಳನ್ನು ಸ್ಥಾಪಿಸಿಕೊಳ್ಳಬೇಕಾದ ಜವಾಬ್ದಾ-ರಿಯನ್ನು ಹೊಂದಿರುತ್ತಾರೆ.

9. **ಪರಿಸರ ರಕ್ಷಣೆ :** ಗ್ರಾಹಕರು ಸಂಪನ್ಮೂಲಗಳನ್ನು ಅನುಪಯುಕ್ತಗೊಳಿಸದೇ ಪರಿಸರದ ಬಗ್ಗೆ ಗೌರವ ಹಾಗೂ ರಕ್ಷಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ಗ್ರಾಹಕ ನ್ಯಾಯಾಲಯ :** ಖರೀದಿಸಿದ ವಸ್ತುವಿನಲ್ಲಿ ದೋಷವಿದ್ದು, ಆ ವಸ್ತುವನ್ನು ವಾಪಸ್ ತೆಗೆದುಕೊಂಡು ಹಣ ಹಿಂತಿರುಗಿಸಲು ಮಾರಾಟಗಾರ ನಿರಾಕರಿಸಿದ ಸಂದರ್ಭದಲ್ಲಿ ಗ್ರಾಹಕರು ಗ್ರಾಹಕ ನ್ಯಾಯಾಲಯದ ಮೊರೆ ಹೋಗಬಹುದು. ಗ್ರಾಹಕ ನ್ಯಾಯಾಲಯದಲ್ಲಿ ದೂರು ಸಲ್ಲಿಸುವಾಗ ಗ್ರಾಹನು ದೂರುದಾರರ ಹೆಸರು, ವಿಳಾಸ, ದೂರಿನ ವಿವರ, ಎದುರು ಕಕ್ಷಿದಾರನ ಹೆಸರು, ವಿಳಾಸ ಮತ್ತು ವಿವರ, ಯಾವ ಸಂದರ್ಭದಲ್ಲಿ ನ್ಯೂನತೆ ಸಂಭವಿಸಿದೆ ಎಂಬುದರ ಬಗ್ಗೆ ಮಾಹಿತಿ, ದೂರಿಗೆ ಸಂಬಂಧಿಸಿದ ಮಾಹಿತಿಗಳನ್ನೊಳಗೊಂಡ ದಾಖಲೆಗಳು, ದೂರದಾರ ಅಪೇಕ್ಷಿಸುವ ಪರಿಹಾರದ ವಿಧಗಳನ್ನು ಸಲ್ಲಿಸಬೇಕು. ನಮ್ಮ ದೇಶದಲ್ಲಿ ಗ್ರಾಹಕ ನ್ಯಾಯಾಲಯಗಳು ಅತ್ಯುತ್ತಮವಾದ ಸೇವೆಯನ್ನೇ ಗ್ರಾಹಕರಿಗೆ ನೀಡುತ್ತಿವೆ. ಗ್ರಾಹಕ ಕಾಯಿದೆ ಹಾಗೂ ಮಾಹಿತಿ ಹಕ್ಕು ಕಾಯಿದೆಗಳೆರಡನ್ನೂ ಸಮರ್ಪಕವಾಗಿ ಬಳಸಿಕೊಂಡಲ್ಲಿ, ಗ್ರಾಹಕ ತನಗಾದ ಅನ್ಯಾಯಕ್ಕೆ ಸರಿಯಾದ ನ್ಯಾಯವನ್ನು ಪಡೆಯಲು ಸಾಧ್ಯವಾಗುತ್ತದೆ.

ಗ್ರಾಹಕರಿಗೆ ದೊರೆಯುವ ಪರಿಹಾರಗಳು : ಗ್ರಾಹಕರ ಹಿತಾರಕ್ಷಣಾ ಕಾಯಿದೆ, 1986ರ ಪ್ರಕಾರ ಶೋಷಿತ ಗ್ರಾಹಕನಿಗೆ ಹಲವು ಪರಿಹಾರಗಳು ದೊರೆಯುತ್ತವೆ ಸರಕಿನಲ್ಲಿರುವ ನ್ಯೂನತೆಯನ್ನು ನಿವಾರಿಸಿಕೊಳ್ಳುವ, ಬದಲಿ ಸರಕನ್ನು ನೀಡುವಂತೆ, ಸರಕಿನ ಮೌಲ್ಯವನ್ನು ವಾಪಸ್ಸು ಪಡೆಯುವ, ನಷ್ಟ ಪರಿಹಾರವನ್ನು ಪಡೆಯುವ ಅಥವಾ ಅನುಚಿತ ವ್ಯಾಪಾರಿ ಪದ್ದತಿಗಳನ್ನು ನಿಲ್ಲಿಸುವ, ಹಾನಿಕಾರಕ ಸರಕುಗಳನ್ನು ಮಾರಾಟ ಮಾಡುದಂತೆ ನಿರ್ಬಂಧ ಹೇರುವ, ಹಾನಿಕಾರಕ ಸರಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ನೀಡುತ್ತದೆ.

**ಉಪಸಂಹಾರ :** ಗ್ರಾಹಕ ಸಂರಕ್ಷಣಾ ಕಾಯಿದೆ, ಗ್ರಾಹಕರಿಗೆ ಅನ್ಯಾಯದ ವ್ಯಾಪಾರ ಅಭ್ಯಾಸಗಳು, ಸುಳ್ಳು ಅಥವಾ ತಪ್ಪುದಾರಿಗೆಳೆಯುವ ಜಾಹೀರಾತುಗಳು ಇತ್ಯಾದಿಗಳಿಂದ ರಕ್ಷಿಸಲು ಗ್ರಾಹಕರಿಗೆ ವಿವಿಧ ಪ್ರಯೋಜನಗಳು ಮತ್ತು ಹಕ್ಕುಗಳನ್ನು ನೀಡುತ್ತದೆ

---

.....22ನೇ ಪುಟದಿಂದ

ಸಂಸ್ಥೆಗಳು ಮತ್ತು ಗುಂಪುಗಳು ಅಂತಹ ಕ್ಷೇತ್ರಗಳಲ್ಲಿ ಕ್ರಿಯೆಯ ಮೂಲಕ #ಇನ್‌ಸ್ಪೈರ್‌ಇನ್ಕ್ಲೂಷನ್ ಮಾಡಬಹುದು

- ಮಹಿಳಾ ಆರ್ಥಿಕ ಸಬಲೀಕರಣವನ್ನು ರೂಪಿಸುವುದು
- ಸ್ತ್ರೀ ಪ್ರತಿಭೆಗಳನ್ನು ನೇಮಿಸಿಕೊಳ್ಳುವುದು, ಉಳಿಸಿಕೊಳ್ಳುವುದು ಮತ್ತು ಅಭಿವೃದ್ಧಿಪಡಿಸುವುದು
- ನಾಯಕತ್ವ, ನಿರ್ಧಾರ-ಮಾಡುವಿಕೆ, ವ್ಯಾಪಾರ ಮತ್ತು STEM ಆಗಿ ಮಹಿಳೆಯರು ಮತ್ತು ಹುಡುಗಿಯರನ್ನು ಬೆಂಬಲಿಸುವುದು
- ಮಹಿಳೆಯರು ಮತ್ತು ಹುಡುಗಿಯರ ಅಗತ್ಯತೆಗಳನ್ನು ಪೂರೈಸುವ ಮೂಲಸೌಕರ್ಯಗಳನ್ನು ವಿನ್ಯಾಸಗೊಳಿಸುವುದು ಮತ್ತು ನಿರ್ಮಿಸುವುದು
- ಮಹಿಳೆಯರು ಮತ್ತು ಹುಡುಗಿಯರು ತಮ್ಮ ಆರೋಗ್ಯದ ಬಗ್ಗೆ ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವುದು
- ಸುಸ್ಥಿರ ಕೃಷಿ ಮತ್ತು ಆಹಾರ ಭದ್ರತೆಯಲ್ಲಿ ಮಹಿಳೆಯರು ಮತ್ತು ಹುಡುಗಿಯರನ್ನು ಒಳಗೊಳ್ಳುವುದು
- ಗುಣಮಟ್ಟದ ಶಿಕ್ಷಣ ಮತ್ತು ತರಬೇತಿಯ ಪ್ರವೇಶದೊಂದಿಗೆ ಮಹಿಳೆಯರು ಮತ್ತು ಹುಡುಗಿಯರನ್ನು ಒದಗಿಸುವುದು
- ಕ್ರೀಡೆಯಲ್ಲಿ ಮಹಿಳೆಯರು ಮತ್ತು ಬಾಲಕಿಯರ ಭಾಗವಹಿಸುವಿಕೆ ಮತ್ತು ಸಾಧನೆಯನ್ನು ಉನ್ನತೀಕರಿಸುವುದು
- ಮಹಿಳೆಯರು ಮತ್ತು ಹುಡುಗಿಯರ ಸೃಜನಶೀಲ ಮತ್ತು ಕಲಾತ್ಮಕ ಪ್ರತಿಭೆಯನ್ನು ಉತ್ತೇಜಿಸುವುದು
- ಮಹಿಳೆಯರು ಮತ್ತು ಹುಡುಗಿಯರ ಪ್ರಗತಿಯನ್ನು ಬೆಂಬಲಿಸುವ ಮತ್ತಷ್ಟು ಕ್ಷೇತ್ರಗಳನ್ನು ಉದ್ದೇಶಿಸಿ


ಒಟ್ಟಾರೆಯಾಗಿ, ನಾವೆಲ್ಲರೂ ಉತ್ತಮ ಹೋರಾಟವನ್ನು ಮಾಡಬಹುದು ಮತ್ತು ಅದು ಸ್ಫೂರ್ತಿಯ ಒಳಗೊಳ್ಳುವಂತೆ ಮಾಡುತ್ತದೆ, ಮಹಿಳೆಯರಿಗೆ ಧನಾತ್ಮಕ ಬದಲಾವಣೆಯನ್ನು ರೂಪಿಸಲು ಸಹಾಯ ಮಾಡಲು ಇತಿಹಾಸವನ್ನು ಎಲ್ಲೆಡೆ ಎಲ್ಲರೂ ನಿರ್ಮಿಸಬಹುದು.

ಒಗ್ಗಟ್ಟಿನಿಂದ ಮುನ್ನಡೆಯಿರ್ರುತ್ತಮ ಇತಿಹಾಸವನ್ನು ಸಮಾಜವನ್ನು ಕೊಡಿಗೆ ನೀಡಲು ಸ್ಫೂರ್ತಿಯಿಂದ ಒಗ್ಗೂಡಿ ಮುನ್ನೆಡೆದರೆ ಮಾತ್ರ ಸಾಧ್ಯ.

**ಮನೆಮನೆಯಲಿ ದೀಪ ಮುಡಿಸಿ ಹೊತ್ತು ಹೊತ್ತಿಗೆ ಅನ್ನ ಉಣಿಸಿ**
**ತಂದೆ ಮಗುವ ತಬ್ಬಿದಾಕೆ ನಿನಗೆ ಬೇರೆ ಹೆಸರು ಬೇಕೆ**
**ಸ್ತ್ರೀ ಅಂದರೆ ಅಷ್ಟೆ ಸಾಕೆ-ಜಿ.ಎಸ್.**

# ಪ್ರಪಂಚದ ಸಹಕಾರಿ ಪತ್ರಿಕೋದ್ಯಮದ ಪಿತಾಮಹ ಇಂಗ್ಲೆಂಡ್‌ನ ಡಾ. ವಿಲಿಯಂ ಕಿಂಗ್ (1786-1865)

– ಶ್ರೀ ಶಂಕರ ಐ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು.



**ಪೀಠಿಕೆ :**

ಇಂದಿನ ಆಧುನಿಕ ಜಗತ್ತು ಮುಂದುವರಿಯುತ್ತಿರುವ ಓಘವನ್ನು ನೋಡಿದರೆ ಪ್ರತಿಯೊಂದು ಕ್ಷೇತ್ರದಲ್ಲೂ "ಡಿಜಿಟಲೀಕರಣ ಮತ್ತು ತಾಂತ್ರಿಕತೆ ಅನಿವಾರ್ಯ" ಎಂದರೆ ಅತಿಶಯೋಕ್ತಿಯಲ್ಲ. ನಮ್ಮ ದೇಶದ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಕೂಸು "DIGITAL INDIA" ಸಾಕಾರಗೊಳ್ಳಬೇಕು ಅಂದರೆ ಎಲ್ಲ ಕ್ಷೇತ್ರದಲ್ಲಿಯೂ ನವನವೀನ ಉತ್ಕೃಷ್ಟವಾದ ತಾಂತ್ರಿಕತೆ ಅಳವಡಿಸಿಕೊಳ್ಳಲೇಬೇಕು. ಅಂದಾಗ ಮಾತ್ರ ನಮ್ಮ ದೇಶ ಜಗತ್ತಿಗೆ ತಾಂತ್ರಿಕತೆಯಲ್ಲಿ ಕೊಡುಗೆಯನ್ನು ಕೊಡಲು ಸಾಧ್ಯ. ಮತ್ತು

**ಪೀಠಿಕೆ : ಸಹಕಾರದ ಹುಟ್ಟು**

ಶೋಷಣೆಯಿಂದ ವಿಮುಕ್ತಿಗೊಳಿಸಿ ಸದಸ್ಯರ ಹಿತಾಸಕ್ತಿಗಳಿಗೆ ಆದ್ಯತೆ ನೀಡಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದು. ಸಹಕಾರಿ ಪದ್ದತಿಯ ಪ್ರಮುಖ ಗುರಿ. ಈ ಹಿನ್ನಲೆಯಲ್ಲಿ ಸಹಕಾರಿ ತತ್ವ, ಸಿದ್ದಾಂತ, ವಿಚಾರಧಾರೆಗಳು ಪ್ರಥಮವಾಗಿ ಇಂಗ್ಲೆಂಡ್ ದೇಶದಲ್ಲಿ ಬೀಜಾಕುರವಾಗಿದ್ದು ಸರ್ವರಿಗೂ ತಿಳಿದಿರುವ ವಿಷಯ. ಈ ದೇಶದ ಇಬ್ಬರು ಸಾಮಾಜಿಕ ಕಳಕಳಿಯುಳ್ಳ ತತ್ವಜ್ಞಾನಿಗಳ ಹೆಸರುಗಳು ಅಗ್ರಸ್ಥಾನದಲ್ಲಿದ ಒಬ್ಬರು ರಾಬರ್ಟ್ ಓವೆನ್, ಮತ್ತೊಬ್ಬರು ಡಾ. ವಿಲಿಯಂ ಕಿಂಗ್,

**ಪತ್ರಿಕೋದ್ಯಮದ ಉಗಮ :**

ರಾಬರ್ಟ್ ಓವೆನ್‌ರು ಉತ್ತಮ ಸಾಮಾಜಿಕ ವ್ಯವಸ್ಥೆಯ ನಿರ್ಮಾಣಕಾಗಿ ಹಾಗೂ ನಿರ್ಗತಿಕರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಸುಧಾರಣೆಗಾಗಿ ಮಾಡಿದ ಪ್ರಯತ್ನ ಪ್ರಯೋಗಗಳು ವಿಫಲವಾದವು. ಈ ಸಂದರ್ಭದಲ್ಲಿ ವೃತ್ತಿಯಲ್ಲಿ ವೈದ್ಯರಾಗಿದ್ದರೂ ಪ್ರವತ್ತಿಯಿಂದ ಸಾಮಾಜಿಕ ಕಳಕಳಿವುಳ್ಳವರಾಗಿದ್ದರು. ಇವರು ಉತ್ತಮ ಪತ್ರಕರ್ತರು ಆಗಿದ್ದು, ಪ್ರಭಲಮಾದ್ಯಮವಾಗಿದ್ದ ಪತ್ರಿಕೊದ್ಯಮವನ್ನು ಪ್ರಭಲ ಅಸ್ತ್ರಗಳನಾಗಿ ಮಾಡಿಕೊಂಡು ತನ್ನ್ಮೂಲಕ ಸಹಕಾರಿ ಪ್ರಚಾರಕ್ಕೆ 'ದಿ ಕೋ– ಅಪರೇಟರ್" ಎಂಬ ಮಾಸಿಕ ನಿಯತಕಾಲಿಕ ಪತ್ರಿಕೆಯ ಪ್ರಕಟಣೆ ಮಾಡಿದರು. 1828ರಲ್ಲಿ ಪ್ರಕಟಗೊಂಡ 'ದಿ ಕೋ– ಅಪರೇಟರ್" ಜಗತ್ತಿನ ಪ್ರಥಮ ಸಹಕಾರಿ ಪತ್ರಿಕೆ ಎಂದು ಹೆಸರುವಾಸಿಯಾಯಿತು.

ಡಾ. ವಿಲಿಯಂ ಕಿಂಗ್ ರವರು 1971 ರಲ್ಲಿ ಇಂಗ್ಲೆಂಡ್‌ನ ಇಪ್ಸವಿಚ್ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿ ಪ್ರಾರಂಬದಲ್ಲಿ ಆಧುನಿಕ ಇತಿಹಾಸ ಅದ್ಯಯನ ಮಾಡಿ (FRCS) ಎಪ್. ಆರ್. ಸಿ.ಎಸ್ ವೈದ್ಯಕೀಯ ಪದವಿಯನ್ನು ಪಡೆದು ಇಂಗ್ಲೆಂಡ್‌ನ ಬ್ರೈಟಾನ್ ಎಂಬಲ್ಲಿ ತಮ್ಮ ವೈದ್ಯಕೀಯ ವೃತ್ತಿಯನ್ನು ಪ್ರಾರಂಬಿಸಿದರು. ಉತ್ತಮ ವೈದ್ಯರಾಗಿ ಸಾಕಷ್ಟು ಸಂಪತ್ತು ಗಳಿಸಬಹುದಾಗಿದ್ದರೂ ಬಡವರ, ದೀನ ದಲಿತರ ವಿಶೇಷತವಾಗಿ ಶೋಷಣೆಗೆ ಒಳಗಾಗಿದ್ದ ಕಾರ್ಮಿಕ ಸಮೂದಾಯದ ವೈದ್ಯರಾಗಿ "ಬಡವರ ವೈದ್ಯವೆಂಬ" ಹೆಸರು ಗಳಿಸಿದರು. ಅವರ ಸೇವೆಗಾಗಿಯೇ ತಮ್ಮ ಜೀವನವನ್ನು ಮೂಡಿಪಾಗಿಟ್ಟರು. ಅವರು ಸಹಕಾರಿ ಪತ್ರಿಕೊದ್ಯಮದ ಮೂಲಕ ಸಹಕಾರಿ ಪದ್ದತಿಯನ್ನು ಪ್ರಚಾರಗೊಳಿಸುತ್ತ ಸಹಕಾರ ಸಂಘಗಳ ಸ್ಥಾಪನೆಗೆ ಉತ್ತೇಜನ ನೀಡಿದರು. ಅಲ್ಲದೆ ಅವರ ಆರ್ಕಷಕ ಹಾಗೂ ಪರಿಣಾಮಕಾರಿ ಲೇಖನಗಳಿಂದ ಅನೇಕ ಸಹಕಾರ ಅಂಗಡಿಗಳು ಸ್ಥಾಪಿತಗೊಂಡುವು. ಡಾ. ವಿಲಿಯಂ ಕಿಂಗ್ ರವರು ಅಪ್ಪಟ ಪ್ರಜಾಪ್ರಭುತ್ವವಾದಿಯಾಗಿದ್ದು ಸ್ವ–ಇಚ್ಚೆಯ ಸದಸ್ಯತ್ವವನ್ನು ಪ್ರಭಲವಾಗಿ ಪ್ರತಿಪಾದಿಸುತ್ತ ಬಂದರು. ಹೀಗಾಗಿ ರಾಕ್‌ಡೇಲ್ ಪಯೋನಿಯರ್ಸ್ ರೂಪಿಸಿಕೊಂಡ ಸಹಕಾರಿ ತತ್ವಗಳಲ್ಲಿ "ಸ್ವಯಂ ಪ್ರೇರಿತ ಮುಕ್ತಸದಸತ್ವಕ್ಕೆ" ಆದ್ಯತೆ ನೀಡಲಾಗಿದೆ.

ರಾಬರ್ಟ್ ಓವೆನ್‌ಅತ್ಯಂತ ನೈಜರೀತಿಯಿಂದ ತಮ್ಮ ವಿಚಾರ ಧಾರೆಯನ್ನು ಪ್ರಕಟಿಸುತ್ತ ಒಬ್ಬ ನೈಜ ಸಹಕಾರಿ

(Practical Cooperator) ಎಂದು ಗುರುತಿಸಲಪಟ್ಟರು. ಹೀಗೆ ರಾಬರ್ಟ್ ಓವೆನ್ ಮತ್ತು ಡಾ. ವಿಲಿಯಂ ಕಿಂಗ್ ಇವರುಗಳು ಪ್ರಪಂಚದ ಸಹಕಾರಿ ಪದ್ದತಿಯ ಆದ್ಯಪ್ರವರ್ತಕರಾಗಿರುತ್ತಾರೆ.

**ಭಾರತದಲ್ಲಿ ಸಹಕಾರಿ ಪತ್ರಿಕೋದ್ಯಮ**

ನಮ್ಮ ದೇಶದಲ್ಲಿ ಸಹಕಾರಿ ಚಳುವಳಿ 1905 ಪ್ರಾರಂಭಗೊಂಡಿದ್ದರೂ ಸಹಕಾರಿ ಪತ್ರಿಕೋದ್ಯಮಕ್ಕೆ ಹೆಚ್ಚಿನ ಅವಕಾಶ ಸಿಗಲಿಲ್ಲ. ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯು ಅಂಗೀಕರಿಸಿದ ಸಹಕಾರಿ ತತ್ವಗಳಲ್ಲಿ ಶಿಕ್ಷಣ ಮತ್ತು

ಪ್ರಚಾರಕ್ಕೆ ಹೆಚ್ಚಿನ ಪ್ರಮುಖ್ಯತೆ ನೀಡಿದೆ. 1912ರಲ್ಲಿ ಸರ್.ಇ.ಡಿ. ಮ್ಯಾಕ್ಲಗನ್ ಸಮಿತಿಯು "ಶಿಕ್ಷಣವಿಲ್ಲದೆ ಸಹಕಾರವಿಲ್ಲ" ಎಂಬ ಅಭಿಪ್ರಯವನ್ನಿ ವ್ಯಕ್ತಪಡಿಸಿತ್ತು ಭಾರತದ ಸಹಕಾರ ಚಳವಳಿಯ ಶೃಂಗ ಸಂಸ್ಥೆಯಾದ ಎನ್. ಸಿ.ಯು. ಐ 'ದಿ ಕೋ– ಅಪರೇಟರ್" ಎಂಬ ಹೇಸರಿನ ಇಂಗ್ಲೀಷ್/ಹಿಂದಿ ಬಾಷೆಗಳಲ್ಲಿ ಪತ್ರಿಕೆಗಳ ಮೂಲಕ ಪ್ರಚಾರಕಾರ್ಯ ಪ್ರಾರಂಬಿಸಿತ್ತು. ಸಹಕಾರಿ ಚಳುವಳಿಯ ಆಗಾದ ಬೆಳವಣಿಗೆಯ ಜೋತೆಯಲ್ಲಿ ಸಹಕಾರಿ ಸಹಿತ್ಯ ಪ್ರಕಟಣೆ ವಿಫಲವಾಗಿ ಬೆಳೆಯಲ್ಲಿಲ ಎಂಬುದು ಅನೇಕ ಸಹಕಾರಿಗಳ ಕೂಗು. ಇತ್ತಿಚಿಗೆ ನಿಧನರಾದ ಅಂತರರಾಷ್ಟ್ರೀಯ ಸಹಕಾರಿ ಮುಖಂಡರಾಗಿದ್ದ ಬಿ.ಎಸ್ ವಿಶ್ವನಾಥರವರು ತಮ್ಮ ಅನೇಕ ಭಾಷಣಗಳಲ್ಲಿ ರಾಷ್ಟ್ರಮಟ್ಟದಲ್ಲಿ ಸಹಕಾರಿ ದೈನಿಕ ಪತ್ರಿಕೆಯ ಪ್ರಾರಂಭದ ಬಗ್ಗೆಗೆ ಕನಸನ್ನು ಕಂಡಿದ್ದರು ಆದರೆ ಆದು ಇನ್ನುತನಕ ಸಾಕಾರಗೊಂಡಿಲ್ಲ. ಕರ್ನಾಟಕ ರಾಜ್ಯಸಹಕಾರ ಮಹಾಮಂಡಳ ಕಳೆದ 50 ವರ್ಷಗಳಿಂದ ಸಹಕಾರ ಎಂಬ ವಾರ ಪತ್ರಿಕೆಯನ್ನು ಪ್ರಕಟಿಸುತ್ತ ಸಹಕಾರ ಸಧಾನೆಗಳ ಬಗ್ಗೆಗೆ ಮಾಹಿತಿನೀಡುತ್ತ ಬಂದಿದೆ. ಅಲ್ಲದೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ "ಸ್ವಾಭಿಮಾನಿ ಸಹಕಾರಿ" ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತ ಸೌಹಾರ್ದ ಸಹಕಾರಿ ಕ್ಷೇತ್ರದ ಧ್ವನಿಯಾಗಿ ಹೊರಹೋಮ್ಮಿದೆ.ಅಲ್ಲದೆ ಸಿಂಚನ ಎಂಬ ಮಾಸಿಕವನ್ನು ರಾಜ್ಯ ಸಹಕಾರಿ ದೃಶಮಾಧ್ಯಮ ಮಹಾಮಂಡಳ ಪ್ರಕಟಿಸುತ್ತಿದೆ. ಆನೇಕ ಜಿಲ್ಲಾ ಸಹಕಾರಿ ಒಕ್ಕೂಟಗಳು ತಮ್ಮದೆಯಾದ ಪತ್ರಿಕೆಗಳನ್ನು ಪ್ರಕಟಿಸುತ್ತಿವೆ. ಆದಾಗಿಯೂ ಈ ಕ್ಷೇತ್ರದ ಆಗಾಧ ಬೆಳವಣಿಗೆಯ ಹಿನ್ನಲೆಯಲ್ಲಿ ಪತ್ರಿಕೋದ್ಯಮ ಇನ್ನು ಹೆಚ್ಚು ಬೆಳವಣಿಗೆ ಹೊಂದಬೇಕಗಿರುವುದು ಅನಿವರ್ಯಾವಾಗಿದೆ ಮತ್ತು ಅವಶ್ಯಕವಾಗಿದೆ

**ಉಪಸಂಹಾರ:**

ಇಂಗ್ಲೆಂಡ್ ದೇಶದಲ್ಲಿ ಪ್ರಥಮವಾಗಿ ಪ್ರಾರಂಬಗೊಂಡ ಸಹಕಾರಿ ಪತ್ರಿಕೋದ್ಯಮ ಸಹಕಾರಿ ಚಳುವಳಿಯ ಆರೋಗ್ಯಕರ ಬೆಳವಣಿಗೆಗೆ ಸಹಕಾರಿ ಆಗಿದೆ. ಸಹಕಾರಿ ಪತ್ರಿಕೋದ್ಯಮದ ಪಿತಾಮಹ ಡಾ. ವಿಲಿಯಂ ಕಿಂಗ್ ರವರನ್ನು ನಾವು ಸದಾ ಸ್ಮರಿಸಬೇಕು.

**ಜೈ ಹಿಂದ್ ಜೈ ಸಹಕಾರ**

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಾನಗಲ್ಲ**



ಶ್ರೀ ಎಂ.ಬಿ.ಕಲಾಲ್
ಅಧ್ಯಕ್ಷರು



ಶ್ರೀ ಬಿ.ಎಸ್.ಅಕ್ಕಿವಳ್ಳಿ
ಉಪಾಧ್ಯಕ್ಷರು

**ಶ್ರೀ ಮಾತಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಪಾವಗಡ**



ಶ್ರೀ ರಾಮಮೂರ್ತಿ ಕೆ.ಎಸ್
ಅಧ್ಯಕ್ಷರು



ಶ್ರೀ ಅಜಿತ್ ರಾಜಯ್ಯ ಪಿ.
ಉಪಾಧ್ಯಕ್ಷರು

**ದಿ. ಗಂಗಾವತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ**



ಶ್ರೀ ವಿರುಪಾಕ್ಷಪ್ಪ ಸಿಂಗನಾಳ
ಅಧ್ಯಕ್ಷರು



ಶ್ರೀ ಮಹಾಲಿಂಗಪ್ಪ ಸೌದ್ರಿ
ಉಪಾಧ್ಯಕ್ಷರು

**ವಿರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಜಮಖಂಡಿ**



ಶ್ರೀ ಪ್ರಭಾಕರ ಬ ಕಾಪಸಿ
ಅಧ್ಯಕ್ಷರು



ಶ್ರೀ ಶ್ರೀಶೈಲ ಈ ಮುಳ್ಳನ್ನವರ
ಉಪಾಧ್ಯಕ್ಷರು

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2023-2025.

# ಅಂತರರಾಷ್ಟ್ರೀಯ ಮಹಿಳಾ ದಿನ

– ಶ್ರೀಮತಿ ಶೋಭಾಮುರುಳಿ ಕೃಷ್ಣ, ಬೆಂಗಳೂರು.



ಬಹ್ಮದೇವನು ಸೃಷ್ಟಿಸಿದ ಅತ್ಯದ್ಭುತ ರೂಪವೇ ಹೆಣ್ಣು, ಎಲ್ಲರ ಬಾಳಿಗೆ ಬೆಳಕಾಗಿ ಬರುವ ಸೃಷ್ಟಿಯೇ ಈ ಹೆಣ್ಣು ಎನ್ನುವಂತೆ ಪ್ರತಿಯೊಬ್ಬ ಸ್ತ್ರೀಯರಲ್ಲೂ ಒಬ್ಬಳು ದುರ್ಗಾ ಶಕ್ತಿ ಇದ್ದಾಳೆ, ಹಾಗಿ ಮಹಿಳೆ ಕುಟುಂಬದ ಹೆಣ್ಣು ಮತ್ತು ಸಮಾಜದ ಶಕ್ತಿ. ಸಮಾಜ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಹಿಂದಿನ ಕಾಲದಲ್ಲಿ ಬೆರಳೆಣಿಕೆ ಎಷ್ಟು ಮಹಿಳೆಯರು ಮಾತ್ರ ಮನೆಯಿಂದ ಹೊರಗೆ ಬಂದು ದುಡಿಯುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ ಮಹಿಳೆ ತಾನು ಎಲ್ಲವನ್ನು ನಿಭಾಯಿಸಬಲ್ಲೇ ಎಂಬುದನ್ನು ತೋರಿಸಿಕೊಟ್ಟಿದ್ದಾಳೆ.

ಸಂಸಾರದ ಜವಾಬ್ದಾರಿ ಹೊತ್ತು ಸಾಗುವಳು ಭೂಮಿ ತೂಕದ ಹೆಣ್ಣು ಸಂಸ್ಕೃತಿ ಸೌಂದರ್ಯದ ಪ್ರತಿಬಿಂಬವೇ ನಮ್ಮ ಭಾರತೀಯ ಹೆಣ್ಣು. ಗಡಿ ಕಾಯುವುದರಿಂದ ಹಿಡಿದು ಕುಟುಂಬದ ಪ್ರತಿಯೊಂದು ಕೆಲಸವನ್ನು ಸಂದರ್ಭಾನುಸಾರವಾಗಿ ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಬಲ್ಲ ಶಕ್ತಿ ತಾಳ್ಮೆ ಉತ್ಸಾಹ ಧೈರ್ಯ ಆತ್ಮಸ್ಥೈರ್ಯ ಪ್ರತಿಯೊಬ್ಬ ಮಹಿಳೆಗಿದೆ ಎನ್ನುವುದರಲ್ಲಿ ಸಂಶಯವಿಲ್ಲ ಪುರುಷರಿಗೆ ಸರಿ ಸಮಾನವಾಗಿ ನಿಂತಿರುವ ಮಹಿಳೆಯರು ಇಂದು ಅನೇಕ ಉನ್ನತ ಹುದ್ದೆಗಳನ್ನು ನಿಭಾಯಿಸುವ ಜವಾಬ್ದಾರಿ ಹೊತ್ತಿದ್ದಾರೆ.

ಇವೆಲ್ಲದರ ನಡುವೆಯೂ ತುಳಿತಕ್ಕೆ ಒಳಗಾಗಿರುವ ಮತ್ತು ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾಗುತ್ತಿರುವ ಅನೇಕ ಮಹಿಳೆಯರನ್ನು ನಾವು ನೋಡಿದ್ದೇವೆ ಅವರಿಗೆ ಧೈರ್ಯ ನೀಡಿ ಮಹಿಳೆಗೆ ತನ್ನ ಹಕ್ಕಿನ ಪರಿಚಯ ಮಾಡಿಸಿ ಆಕೆಗೆ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವ ಉದ್ದೇಶದಿಂದ ಮಹಿಳೆಯರ ಸಬಲೀಕರಣಕ್ಕಾಗಿ ಸ್ತ್ರೀಶಕ್ತಿ ಸಂಘಗಳ ಹಲವಾರು ಯೋಜನೆಗಳ ಮುಖಾಂತರ ಮಹಿಳೆಯರ ಬಲವರ್ಧನೆಗಾಗಿ ಮತ್ತು ಮುಖ್ಯವಾಹಿನಿಗೆ ತರಲು ಸರ್ಕಾರದ ನಿರಂತರ ಪ್ರಯತ್ನ ಇದ್ದೇ ಇದೆ. ಅಂತೆಯೇ ಅದೆಷ್ಟೋ ಸಂಘಗಳು ದೊಡ್ಡ ದೊಡ್ಡ ಸಂಸ್ಥೆಗಳಾಗಿ ಕಂಪನಿಗಳಾಗಿ ಬೆಳೆದಿರುವುದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಅಂತೆಯೇ ಮಹಿಳೆಯರ ಸಂಘಟನೆಗಳು ಸಮಾಜಮುಖಿ ಕೆಲಸಗಳಲ್ಲಿ ತೊಡಗಿರುವುದನ್ನು ನೋಡುತ್ತಿದ್ದೇವೆ. ಮಹಿಳೆಯರ ಸುರಕ್ಷತೆ ಸಮಾಜದ ಹೊಣೆಗಾಗಿದೆ. ಹೆಣ್ಣನ್ನು ಅನುಕಂಪದಿಂದ ನೋಡುವುದು ಬೇಡ ಆದರೆ ಸಮಾಜ ಅಥವಾ ಸರ್ಕಾರ ಅವಕಾಶಗಳನ್ನು ಕಲ್ಪಿಸಿಕೊಟ್ಟರೆ ದಿಟ್ಟತನದಿಂದ ಸುಸಂಸ್ಕೃತ ಸ್ವಾಸ್ಥ್ಯಯುತವಾದ ಸಮಾಜ ನಿರ್ಮಿಸುವ ಶಿಲ್ಪಿಯಾಗುತ್ತಾಳೆ.

ಸರ್ಕಾರ ಮಹಿಳೆಯರಿಗೆ ಸ್ಥಾನಮಾನ ಹೆಚ್ಚಿಸುವ ಸಲುವಾಗಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಿ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಸ್ಥಾನಮಾನ ಹೆಚ್ಚಿಸಲು ಸಮಾನ ಅವಕಾಶ ಸಿಗುವಂತೆ ಮಾಡಲು ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಂಡಿದೆ. ಈ ಮೂಲಕ ಅವರಿಗೆ ಸಮಾಜದಲ್ಲಿ ಗೌರವ ದೊರೆಯುವಂತಾಗಿದೆ. ಕಳೆದ 50 ವರ್ಷಗಳಿಂದ ರಾಷ್ಟ್ರ ಅಂತರ ರಾಷ್ಟ್ರದಲ್ಲಿ ಆಚರಿಸಿಕೊಂಡು ಬರುತ್ತಿರುವ ಮಹಿಳಾ ದಿನಾಚರಣೆಯ ಪರಿಣಾಮವಾಗಿ ಮಹಿಳೆ ಇಂದು ಆರ್ಥಿಕ, ಸಾಮಾಜಿಕ, ರಾಜಕೀಯ, ಆರೋಗ್ಯ, ಶಿಕ್ಷಣ, ಸಹಕಾರ ಕ್ಷೇತ್ರಗಳಲ್ಲಿ ಮುಂಚೋಣಿಯಲ್ಲಿ ಬರುವಂತಾಗಿದೆ. ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆಯಾಗಿದೆ.

ಭಾರತದಲ್ಲಿ ಫೆಬ್ರವರಿ 13 ಅನ್ನು ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಿ ಮಹಿಳೆಯರನ್ನು ಗೌರವಿಸಲಾಗುತ್ತಿದೆ.

ರಾಷ್ಟ್ರೀಯ ಮಹಿಳಾ ದಿನವನ್ನು ಫೆಬ್ರವರಿ 13 ರಂದು ಆಚರಣೆ ಮಾಡಲು ಒಂದು ಕಾರಣವಿದೆ. ಅಂದು ಭಾರತದ ಕೋಗಿಲೆ, ಸ್ವಾತಂತ್ರ್ಯ ಹೋರಾಟಗಾರ್ತಿ ಎಂದೇ ಪ್ರಸಿದ್ಧರಾದ ಭಾರತದ ಪ್ರಪ್ರಥಮ ಮಹಿಳಾ ರಾಜ್ಯಪಾಲೆ ಸರೋಜಿನಿ ನಾಯ್ಡು ರವರ ಜನ್ಮದಿನವೂ ಹೌದು. (ಅವರು 1879 ಫೆಬ್ರವರಿ 13 ರಂದು ಜನಿಸಿದರು) ಅಂದಿನ ಕಾಲದಲ್ಲಿಯೇ ಮಹಿಳಾಪರ ಚಿಂತನೆಯನ್ನು ಇಟ್ಟುಕೊಂಡಿದ್ದ ಅವರು ಮಹಿಳಾ ಭಾರತ ಸಂಘ (WIA) ಸ್ಥಾಪಿಸಿದ ಸಂಸ್ಥಾಪಕರಲ್ಲಿ ಇವರು ಕೂಡ ಒಬ್ಬರು. ಇವರು ಸ್ತ್ರೀವಾದಿ, ಕವಿಗಳು, ಮಹಿಳಾ ವಿಮೋಚನೆ ವಿಚಾರಗಳ ಪ್ರತಿಪಾದಕರು ಕೂಡ ಆಗಿದ್ದರು. ಭಾರತದಲ್ಲಿ ಮಹಿಳೆಯರ ಅಭಿವೃದ್ಧಿಗೆ ನೀಡಿದ ಮಹತ್ವದ ಕೊಡುಗೆಗಳನ್ನು ಪರಿಗಣಿಸಿ ಅವರ ಜನ್ಮದಿನವನ್ನು ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತಿದೆ.

ಸರ್ವರಿಗೂ ವಿಶ್ವ ಮಹಿಳಾ ದಿನಾಚರಣೆಯ ದಿನದ ಶುಭಾಶಯಗಳು

**"ತೂರಬೇಡಿ ಗಾಳಿಗೆ ಹೆಣ್ತನದ ಘನತೆಯ ಜೀವಕ್ಕೆ ಜೀವ ಕೊಡುವ ಇವಳು ಕಡಿಮೆ ಯಾರಿಗೆ"**

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003